November 2021
ವಿತ್ತಸಂಚಿಕೆ

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞ

**ಸಲಹೆ ನಮ್ಮದು ಹೂಡಿಕೆ ನಿಮ್ಮದು**


INSPIRE INDIA WEALTH PRIVATE LTD., No.119, IInd Floor, Above HDFC Bank, Gandhi Bazar Main Road, Basavangudi, Bangalore - 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



ನೀನು ಇವತ್ತು ಯಶಸ್ವಿಯಾಗಿದ್ದಿ ಎಂದರೆ ಯಾರಾದರೊಬ್ಬರು ನೀವು ಸರಿಯಾದ ದಾರಿಯಲ್ಲಿದ್ದೀರಿ ಎಂದು ಬೆನ್ನು ತಟ್ಟಿದ್ದೇ ಕಾರಣ.
–ಮಿಲಿಂಡಾ ಗೇಟ್ಸ್



ಯಶಸ್ಸಿನ ಏಣಿಯ ತುದಿಯಲ್ಲಿ ಯಾವತ್ತೂ ದಟ್ಟಣೆ ಇರದಂತೆ ನೋಡಿಕೊಳ್ಳಬೇಕು.
–ನೆಪೋಲಿಯನ್ ಹಿಲ್



ಹಣವು ಉತ್ತಮರ ಕೈಯಲ್ಲಿದ್ದಾಗ ಅದು ಅಲ್ಲಿ ಬಹಳ ಕಾಲ ಸ್ಥಿರವಾಗಿರುತ್ತದೆ ಮತ್ತು ಆ ಕೈಯಲ್ಲಿ ಅದು ದ್ವಿಗುಣಗೊಳ್ಳುತ್ತ ಹೋಗುತ್ತದೆ.
–ಇಡೊಯು ಕೊಯೆನಿಕನ್

# ಷೇರುಪೇಟೆಯ ಈ ಪರಿಯ ಜಿಗಿತದ ಹಿಂದೆ

ಅಮೆರಿಕ, ಭಾರತ, ಜಪಾನ್... ಪ್ರಪಂಚದ ಬಹುತೇಕ ಎಲ್ಲ ರಾಷ್ಟ್ರಗಳೂ 2020ರಲ್ಲಿ ಹೈರಾಣಾಗಿ ಹೋಗಿದ್ದವು. ಅವುಗಳ ಮುಂದೆ ಕೋವಿಡ್–19ರ ಪ್ರಕರಣಗಳ ಬೃಹತ್ ಪಟ್ಟಿಯೇ ಇತ್ತು. ಇಷ್ಟೇನು, ಇಡೀ ಭೂಮಂಡಲವೇ ಕೋವಿಡ್–19 ಎಂಬ ವೈರಸ್‌ನಿಂದ ವ್ಯಾಪಿಸಿಕೊಂಡು ವಿಲವಿಲ ಒದ್ದಾಡಿತು. ನಮ್ಮ ಜೀವ, ಜೀವನದ ಮೇಲೆ ಅದು ಬೀರಿದ ಪ್ರತಿಕೂಲ ಪರಿಣಾಮವಿದೆಯಲ್ಲ, ಅದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಅರ್ಥ ವ್ಯವಸ್ಥೆಯ ಮೇಲೆ ಬಿದ್ದ ಪೆಟ್ಟು ಅಸಾಮಾನ್ಯವಾದುದು. ಇಡೀ ವಿಶ್ವದ ಇತಿಹಾಸದಲ್ಲಿ ಜಾಗತಿಕ ಅರ್ಥ ವ್ಯವಸ್ಥೆ ಅನುಭವಿಸಿದ ಹಿನ್ನಡೆಯ ಕಾರಣದಿಂದಾಗಿ ಅನೇಕ ಮಂದಿ ಆರ್ಥಿಕ ತಜ್ಞರು ಕೋವಿಡ್–19ನ್ನು 2020ರ "ಕಪ್ಪು ಹಂಸ" ಎಂದು ಘೋಷಿಸಿಬಿಟ್ಟಿದ್ದರು.

ಆದರೆ ಅಚ್ಚರಿ ನೋಡಿ, ವಿಶ್ವದ ಎಲ್ಲ ಷೇರು ಮಾರುಕಟ್ಟೆಯಲ್ಲಿ ವಿಸ್ಮಯದ ಸಂಗತಿಗಳು ನಡೆಯುತ್ತಿವೆ. ಅದರಲ್ಲೂ ವಿಶೇಷವಾಗಿ ಭಾರತದ ಷೇರು ಮಾರುಕಟ್ಟೆಯ ಜಿಗಿತವನ್ನು ಗಮನಿಸಿ. ಭಾರತದ ಹಣಕಾಸು ಮಾರುಕಟ್ಟೆ ಕೋವಿಡ್ ವೈರಸ್ ಎಬ್ಬಿಸಿದ ಪ್ರಚಂಡ ಚಂಡಮಾರುತವನ್ನು ಅಖಂಡ ಧೈರ್ಯದಿಂದ ಎದುರಿಸಿದ್ದು ಮಾತ್ರವಲ್ಲದೆ, ಅದು ಜಗತ್ತಿನ ಇತರ ಎಲ್ಲ ಮಾರುಕಟ್ಟೆಗಳನ್ನೂ ಹಿಂದಿಕ್ಕಿ ನಾಗಾಲೋಟದಲ್ಲಿ ಮುನ್ನುಗ್ಗಿತು. ಕೋವಿಡ್ ಪೂರ್ವದಲ್ಲಿದ್ದ ಹಂತಕ್ಕೆ ಮಾರುಕಟ್ಟೆ ಮರು–ಜಿಗಿತ ಕಂಡಿದ್ದು ಅಥವಾ ಈಕ್ವಿಟಿ ಮಾರುಕಟ್ಟೆಯಲ್ಲಿನ ಭರವಸೆಯ ಅಲೆಗಳು, ಈಕ್ವಿಟಿ ಮಾರುಕಟ್ಟೆಗಳು ಎಲ್ಲ ನಿರೀಕ್ಷೆಗಳನ್ನು ಮೀರಿ ಮುನ್ನಡೆದವು. ಕೋವಿಡ್ ಮಾಡಿದ ಪ್ರಹಾರದಿಂದ ಚೇತರಿಸಿಕೊಳ್ಳುವುದರಲ್ಲೇ ನಿರತರಾಗಿದ್ದ ನಮಗೆ ಇದು ನಿಜಕ್ಕೂ ಮಹದಾಶ್ಚರ್ಯವನ್ನು ಉಂಟುಮಾಡಿತ್ತು. ಹಾಗಾದರೆ ಮಾರುಕಟ್ಟೆ ನಿಜಕ್ಕೂ ಯಾಕೆ ಏರುಗತಿಯಲ್ಲೇ ಸಾಗುತ್ತಿದೆ? ನಿಮ್ಮ ಕುತೂಹಲವನ್ನು ತಣಿಸುವ ಟೇಬಲ್ ಇಲ್ಲಿದೆ;



| ಪ್ರಮುಖ ದಿನಾಂಕಗಳು (ಕೇವಲ ಸೂಚಕದ ಉದ್ದೇಶದಿಂದ) | ಪಡೆದ ದಿನಾಂಕ (ಈ ಹಿಂದಿನ ಪ್ರಮುಖ ದಿನಾಂಕ) | ಮಾರುಕಟ್ಟೆಯ ಸೂಚ್ಯಂಕಗಳು | |
|---|---|---|---|
| | | ಎನ್‌ಎಸ್‌ಇ ನಿಫ್ಟಿ | ಬಿಎಸ್‌ಇ ಸೂಚ್ಯಂಕ |
| 03–ಮಾರ್ಚ್ 2020 | – | 11,303 | 38624 |
| 23–ಮಾರ್ಚ್ 2020 | 20 | 7,610 | 25,981 |
| 20–ಜುಲೈ 2020 | 127 | 11,301 | 38,493 |
| 27– ಸೆಪ್ಟೆಂಬರ್ 2020 | 426 | 17,855 | 60,078 |
| 23–ಮಾರ್ಚ್ 2020ರಿಂದ 27– ಸೆಪ್ಟೆಂಬರ್ 2021ರ ತನಕ | 553 | – | – |

**ಎನ್‌ಎಸ್‌ಇ ನಿಫ್ಟಿ ಚಲನೆ ಮಾರ್ಚ್ 2020ರಿಂದ ಸೆ.2021ರ ತನಕ**

ಮಾರುಕಟ್ಟೆಯ ಈ ಪಯಣ ಸಾಕಷ್ಟು ಮೊದಲೇ ಪ್ರತಿಯೊಬ್ಬರೂ ನಿರೀಕ್ಷೆ ಮಾಡಿದಂತೆಯೇ ಇತ್ತು. ಕೋವಿಡ್ ವೈರಸ್ ವಿಶ್ವದಾದ್ಯಂತ ಹರಡುತ್ತಿದೆ ಎಂಬುದು ತಿಳಿಯುತ್ತಲೇ ಮಾರುಕಟ್ಟೆಯಲ್ಲಿ ಶೇ.33ರಷ್ಟು ಕುಸಿತ ಕಾಣಲು 20 ದಿನಗಳು ಬೇಕಾದವು. ಇದು ಈಕ್ವಿಟಿ ಮಾರುಕಟ್ಟೆಯನ್ನು ಪ್ರವೇಶಿಸಲು ಸಕಾಲ ಎಂದು ಅನೇಕರು ಭಾವಿಸಿದರು. ಹಾಗೆ ಬಂದ ಅವಕಾಶವನ್ನು ಬಳಸಿಕೊಂಡರು ಕೂಡ. ಆ ಬಳಿಕ ಮಾರುಕಟ್ಟೆಯಲ್ಲಿ ಕ್ರಮೇಣ ಚೇತರಿಕೆ ಕಾಣಿಸಿಕೊಳ್ಳಲು ಆರಂಭವಾಯಿತು. ಆ ಚೇತರಿಕೆಯೂ ಅತ್ಯಂತ ನಿಧಾನ ಗತಿಯಲ್ಲಿತ್ತು. ಶೇ.48ರಷ್ಟು ಏರಿಕೆಯನ್ನು ಕಾಣಲು ಸುಮಾರು ನಾಲ್ಕು ತಿಂಗಳುಗಳು ಬೇಕಾದವು. 2021ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕಾಣಿಸಿಕೊಂಡ ಏರಿಳಿತಗಳನ್ನು ಹೊರತುಪಡಿಸಿದರೆ ಕಳೆದ ಸರಿಸುಮಾರು 14 ತಿಂಗಳುಗಳ ಅವಧಿಯಲ್ಲಿ ಮಾರುಕಟ್ಟೆ ಒಟ್ಟಾರೆಯಾಗಿ ಏರುಗತಿಯಲ್ಲಿಯೇ ಸಾಗುತ್ತಿದ್ದುದು ಸಾಮಾನ್ಯವಾಗಿ ಎಲ್ಲರೂ ಗಮನಿಸಿರುವ ಅಂಶ. ಸರಿದುಹೋದ ಹದಿನೆಂಟು ತಿಂಗಳುಗಳ ಲೆಕ್ಕಾಚಾರ ಮಾಡಿಕೊಂಡರೆ ಮಾರುಕಟ್ಟೆಯು ಶೇ.130ಕ್ಕೂ ಅಧಿಕ ನಿಶ್ಚಿತವಾದ ಆದಾಯವನ್ನು ತಂದುಕೊಟ್ಟಿದೆ ಎನ್ನುವುದು ಸುಳ್ಳಲ್ಲ. ಬಿಎಸ್‌ಇ ಸೂಚ್ಯಂಕವು ಒಂದೇ ವರ್ಷದಲ್ಲಿ (2021ರಲ್ಲಿ) 50000 ಮತ್ತು 60000 ಅಂಕಗಳನ್ನು ದಾಟುವ ಮೂಲಕ ಎರಡು ಪ್ರಮುಖ ಐತಿಹಾಸಿಕ ಸಾಧನೆಯನ್ನು ಮಾಡಿದೆ ಎನ್ನುವುದು ಗಮನಾರ್ಹ. ಎಲ್ಲಕ್ಕಿಂತ ಮುಖ್ಯವಾದ ಇನ್ನೊಂದು ಅಂಶವೇನೆಂದರೆ ಕಳೆದ ವರ್ಷದಲ್ಲಿ ಪ್ರಮುಖ ಷೇರುಗಳು ಶೇ.55ಕ್ಕೂ ಅಧಿಕ ಏರಿಕೆಯನ್ನು ಕಂಡಿದೆ. ಮಾರುಕಟ್ಟೆಗಳಲ್ಲಿನ ಮುಂಚಲನೆ ಮತ್ತು ವಿಶ್ವಾಸಕ್ಕೆ ಅಂಕಿ–ಅಂಶಗಳೇ ಸಾಕ್ಷಿ ಹೇಳುತ್ತವೆ.

**ಕಾರಣಗಳನ್ನು ಪತ್ತೆ ಮಾಡುವ ಸಮಯ:** ದೇಶದ ಆರ್ಥಿಕತೆ

ಅಷ್ಟೇನೂ ಉತ್ತಮ ಸ್ಥಿತಿಯಲ್ಲಿ ಇಲ್ಲದೇ ಇದ್ದರೂ ಕೂಡ ಯಾಕೆ ಮಾರುಕಟ್ಟೆಯಲ್ಲಿ ಗೂಳಿಯ ಓಟ ಮುಂದುವರಿದಿದೆ? ಇದಕ್ಕೆ ಒಂದು ಮಾತಿನ ಉತ್ತರವನ್ನು ನೀಡಲು ಸಾಧ್ಯವಿಲ್ಲದೇ ಇದ್ದರೂ ಇಂತಹ ಕಾಲಘಟ್ಟದಲ್ಲಿನ ಈ ರೀತಿಯ ಏರುಗತಿಯ ಪ್ರವೃತ್ತಿ ಅನೇಕರನ್ನು ದಿಗ್ಭ್ರಮೆಗೆ ಒಳಪಡಿಸಿದೆ ಎನ್ನುವುದು ಮಾತ್ರ ಸತ್ಯ. ಇಂತಹ ಒಂದು ಪ್ರವೃತ್ತಿಯ ಒಗಟನ್ನು ಒಡೆಯುವ ಕೆಲಸವನ್ನು ನಾವು ತೀರಾ ಜನಸಾಮಾನ್ಯರ ರೀತಿಯಲ್ಲಿ ಮಾಡೋಣ.

**ಅವಕಾಶದ ಲಾಭ ಪಡೆಯುವುದು:** ಆರಂಭದ ದಿನಗಳಲ್ಲಿ ನಮ್ಮಲ್ಲೊಂದು ಭರವಸೆ ಇರುತ್ತಿತ್ತು; ಸಮಸ್ಯೆಯ ಮೂಲ ಅಥವಾ ಗಾತ್ರ ಏನೇ ಇದ್ದರೂ ಕೂಡ ಮಾರುಕಟ್ಟೆ ಇಂದಲ್ಲ ನಾಳೆ ಚೇತರಿಸಿಕೊಳ್ಳುತ್ತದೆ ಎಂಬ ಆಶಯ. ಮಾರುಕಟ್ಟೆಯಲ್ಲಿ ದಿಢೀರ್ ಉಂಟಾಗಿರುವ ಕುಸಿತವನ್ನು ಅವಕಾಶ ಎಂದು ಭಾವಿಸಲಾಗುತ್ತಿತ್ತು. ಷೇರುಗಳ ಬಗ್ಗೆ ಉತ್ತಮವಾದ ಅರಿವು ಮಾರುಕಟ್ಟೆ ಬಗೆಗಿನ ಭಯವನ್ನು ಕೂಡ ಅವಕಾಶವಾಗಿ ಪರಿಗಣಿಸಲಾಗುತ್ತಿತ್ತು. ಈ ಮೂಲಕ ಷೇರು ಮಾರುಕಟ್ಟೆಯೊಂದಿಗಿನ ಪಯಣ ಆರಂಭವಾಗುತ್ತಿತ್ತು.

ಮಾರುಕಟ್ಟೆಗಳು ಭವಿಷ್ಯದತ್ತ ದೃಷ್ಟಿ ನೆಟ್ಟಿದ್ದರೆ ಆರ್ಥಿಕ ದತ್ತಾಂಶಗಳು ಇತಿಹಾಸದ ಕಡೆಗೆ ದೃಷ್ಟಿ ನೆಟ್ಟಿರುತ್ತದೆ. ಇತ್ತೀಚಿನ ದಿನಗಳಲ್ಲಿ ಜಗತ್ತಿನ ಅನೇಕ ರಾಷ್ಟ್ರಗಳು ಆರ್ಥಿಕವಾಗಿ ಕಡು ಕಷ್ಟದ ದಿನಗಳನ್ನು ಎದುರಿಸುತ್ತಿವೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಕುತೂಹಲದ ಸಂಗತಿ ಎಂದರೆ ಭಾರತವು ಇತರ ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳು ಅಚ್ಚರಿ ಪಡುವ ರೀತಿಯಲ್ಲಿ ಮುನ್ನಡೆಯನ್ನು ಸಾಧಿಸುತ್ತಿದೆ. ದಿಟ್ಟವಾದ ಆಡಳಿತಾತ್ಮಕ ಕ್ರಮಗಳಿಂದಾಗಿ ಆರ್ಥಿಕವಾಗಿ ತಲೆ ಎತ್ತಿ ನಿಲ್ಲುವಂತಹ ಭರವಸೆಯಂತೂ ವ್ಯಕ್ತವಾಗಿದೆ. ಚೀನಾದ ಹಿನ್ನಡೆಯು ಅನೇಕ ಭಾರತೀಯ ಕಂಪೆನಿಗಳು/ಕ್ಷೇತ್ರಗಳಿಗೆ ಲಾಭವಾಗಲಿದೆ ಎಂಬ ನಿರೀಕ್ಷೆಗಳಿದ್ದವು. ಹಾಗಾಗಿ ಭಾರತವು ಜಾಗತಿಕವಾಗಿ ಪೈಪೋಟಿಯನ್ನು ನೀಡಬಲ್ಲಂತಹ ಕೆಲವೇ ಕೆಲವು ವಲಯಗಳಲ್ಲಿ ರ್‍ಯಾಲಿ ಆರಂಭವಾಯಿತು. ಸದ್ಯದ ಪರಿಸ್ಥಿತಿ ಅನಿಶ್ಚಿತತೆಯಿಂದ ಕೂಡಿದ್ದರೂ ಕೂಡ ಸುದೀರ್ಘಾವಧಿಯ ಪ್ರಗತಿ ಚಿತ್ರಣವು ಸ್ಥಿರವಾಗಿದೆ ಮತ್ತು ಹೆಚ್ಚು ಶಕ್ತಿದಾಯಕವಾಗಿದೆ. ಯಾಕೆಂದರೆ ಭಾರತದ ನಿರ್ವಹಣೆಯು ಉತ್ತಮವಾಗಿದೆ.

**ಲಿಕ್ವಿಡಿಟಿ ಮತ್ತು ರಿಟೇಲ್ ಪಾಲ್ಗೊಳ್ಳುವಿಕೆಯಲ್ಲಿ ಪ್ರಗತಿ:** ಲಾಕ್‌ಡೌನ್ ಮತ್ತು ಉಳಿತಾಯಗಳ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಂಡಿದ್ದರ ಪರಿಣಾಮವಾಗಿ ಜನ ಉಳಿತಾಯ ಮತ್ತು ಹೂಡಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದರು. ಬ್ಯಾಂಕಿನ ನಿಶ್ಚಿತ ಠೇವಣಿಗಳಂತಹ ಸಾಂಪ್ರದಾಯಿಕ ಉಳಿತಾಯ ಮಾರ್ಗಗಳಲ್ಲಿ ಇರುವ ಕಡಿಮೆ ಬಡ್ಡಿ ದರದ ಹಿನ್ನೆಲೆಯಲ್ಲಿ ಏರುಗತಿಯ ಈಕ್ವಿಟಿ ಮಾರುಕಟ್ಟೆಯ ಕಡೆಗೆ ಹೆಚ್ಚಿನ ಆಸಕ್ತಿ ತಳೆಯುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಅರ್ಥ ವ್ಯವಸ್ಥೆಗೆ ಪೂರಕವಾಗಿ ಸರ್ಕಾರವು ಕೈಗೊಂಡ ಹಣಕಾಸು ನೀತಿಗೆ ಸಂಬಂಧಿಸಿದ ಕ್ರಮಗಳಿಂದಾಗಿ ಲಿಕ್ವಿಡಿಟಿಗೆ ಇನ್ನಷ್ಟು ಉತ್ತೇಜನ ದೊರೆಯಿತು. ವ್ಯವಸ್ಥೆಯಲ್ಲಿದ್ದ ಹೆಚ್ಚುವರಿ ಲಿಕ್ವಿಡಿಯನ್ನು ಮ್ಯೂಚುಯಲ್ ಫಂಡ್ಸ್ ಮತ್ತು ಈಕ್ವಿಟಿ ಮಾರುಕಟ್ಟೆ ಕಡೆಗೆ ತಿರುಗಿದವು. ಈ ಬಾರಿ ನಡೆದ ಇನ್ನೊಂದು ಬೆಳವಣಿಗೆ ಎಂದರೆ ಎಫ್‌ಐಐಗಳು/ವಿದೇಶಿ ಹೂಡಿಕೆದಾರರು ಮಾರಾಟದಲ್ಲಿ ತೊಡಗಿಕೊಂಡರು ಮತ್ತು ದೇಶೀಯ ಹೂಡಿಕೆದಾರರು/ಫಂಡ್ಸ್/ ಸಂಸ್ಥೆಗಳು ಖರೀದಿಯಲ್ಲಿ ತೊಡಗಿದರು. ಜೊತೆಗೆ ಸಣ್ಣ ಹೂಡಿಕೆದಾರರೂ ಮಾರುಕಟ್ಟೆಯನ್ನು ಪ್ರವೇಶಿಸಿದರು.

**ಸುಖದ ಭಾವನೆ:** ಭರಪೂರ ಲಿಕ್ವಿಡಿಟಿ, ಕಡಿಮೆ ಬಡ್ಡಿದರದ ವ್ಯವಸ್ಥೆ, ಚೇತರಿಕೆ ಕಾಣುತ್ತಿರುವ ಮಾರುಕಟ್ಟೆ, ಅತ್ಯಂತ ಶಕ್ತಿಶಾಲಿಯಾದ ಮೂಲಭೂತ ಅಂಶಗಳು, ಅಷ್ಟೇ ಬಲವಾದ ಗಳಿಕೆ, ಉನ್ನತ ಮಟ್ಟದಲ್ಲಿರುವ ಜಾಗತಿಕ ಸ್ಥಾನಮಾನ, ಭರಪೂರ ಬಂಡವಾಳದ ಒಳಹರಿವು, ಪೂರಕವಾದ ಹಣಕಾಸು ನೀತಿ, ಗಟ್ಟಿಯಾದ ರಿಟೇಲ್ ಪಾಲ್ಗೊಳ್ಳುವಿಕೆ ಮತ್ತು ಇದರ ಜೊತೆಗೆ ಸವಾಲುಗಳನ್ನು ನಿಭಾಯಿಸುವ ಆತ್ಮವಿಶ್ವಾಸ ಮತ್ತು ಮಹತ್ವಾಕಾಂಕ್ಷೆ ಈಕ್ವಿಟಿ ಮಾರುಕಟ್ಟೆಯಲ್ಲಿ ಸುಸ್ಥಿರವಾದ ಏರುಗತಿಯ ಪ್ರವೃತ್ತಿಗೆ ಕಾರಣವಾಗಿದೆ. ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ವರದಿಯ ಪ್ರಕಾರ 14 ದಶಲಕ್ಷಕ್ಕೂ ಅಧಿಕ ಹೊಸ ವೈಯಕ್ತಿಕ ಹೂಡಿಕೆದಾರರು 2020–2021ರಲ್ಲಿ ಹೂಡಿಕೆಯನ್ನು ಆರಂಭಿಸಿದ್ದಾರೆ. ಹಾಗಾಗಿ ಇಂದು ಅನೇಕ ಮಂದಿ ಹೂಡಿಕೆದಾರರು ಅಧಿಕ ಆದಾಯದ ನಿರೀಕ್ಷೆಯಲ್ಲಿ ಹೊಸ ಈಕ್ವಿಟಿ ಹೂಡಿಕೆಗಳನ್ನು ಮಾಡುತ್ತಿದ್ದಾರೆ. ಅತ್ಯಲ್ಪವಾದ ಅವಧಿಯಲ್ಲಿ ಉತ್ತಮ ಲಾಭವನ್ನು ಗಳಿಸುವ ಆಶಾವಾದದಲ್ಲಿ ಅವರಿದ್ದಾರೆ. ಇದರ ಜೊತೆಗೆ ಈ ಅವಕಾಶವು ಕೈತಪ್ಪಿ ಹೋದೀತು ಎನ್ನುವ ಭಯ ಹೊಸ ಹೂಡಿಕೆದಾರರಲ್ಲಿ ಮನೆ ಮಾಡಿದೆ.

## ಸದೃಢ ಆರ್ಥಿಕ ಸುಧಾರಣೆ

**ಕೊನೆಗೂ ಅನೇಕರು ಅಂದುಕೊಂಡಿದ್ದು ನಿಜವಾಗಿದೆ. ಅತ್ಯಧಿಕ ಚೇತರಿಕೆ ಮತ್ತು ಅತ್ಯಂತ ಕಡಿಮೆ ಮರಣ ಪ್ರಮಾಣದೊಂದಿಗೆ ಕೋವಿಡ್‌ನ ಮೊದಲ ಅಲೆಯಿಂದ ಚೇತರಿಸಿಕೊಂಡ ಭಾರತ ಜಯಶಾಲಿಯಾಯಿತು. ಸರ್ಕಾರ ಮಂಡಿಸಿದ ಬಜೆಟ್ ಉತ್ತಮವಾಗಿತ್ತು, ಲಸಿಕಾ ಆಂದೋಲನವು ಕ್ರಮೇಣ ತನ್ನ ಗತಿಯನ್ನು ಪಡೆದುಕೊಳ್ಳುತ್ತಿತ್ತು ಮತ್ತು ದೇಶದ ಅರ್ಥ ವ್ಯವಸ್ಥೆಯು ನಿಧಾನ ಗತಿಯಲ್ಲಿ ತೆರೆದುಕೊಳ್ಳತೊಡಗಿತ್ತು. ಕಡಿಮೆ ತೆರಿಗೆ ದರಗಳೊಂದಿಗೆ ಹಣಕಾಸು ವರ್ಷ 21ರ ನಾಲ್ಕನೇ ತ್ರೈಮಾಸಿಕದಲ್ಲಿ ಅನೇಕ ವಲಯಗಳು ಮತ್ತು ಅನೇಕ ಕಂಪೆನಿಗಳು ಉತ್ತಮ ಗಳಿಕೆಯನ್ನೇ ಕಂಡಿದ್ದು ಸುಧಾರಣೆಯ ಇನ್ನೊಂದು ಆಯಾಮಕ್ಕೆ ಕಾರಣವಾಯಿತು. ಇದು ಜನರಲ್ಲಿನ ಭರವಸೆಯನ್ನು ಇನ್ನಷ್ಟು ಗಟ್ಟಿ ಮಾಡಿತು ಮತ್ತು ಅವರು ಕೋವಿಡ್‌ನಿಂದ ಆಚೆಗೆ ನೋಡಲು ಶುರುಮಾಡಿದರು. ಕಳೆದ ಕೆಲವು ತಿಂಗಳಲ್ಲಿ ಭಾರತದ ಅರ್ಥ ವ್ಯವಸ್ಥೆಯು ಅತ್ಯುತ್ತಮ ನಿರ್ವಹಣೆಯನ್ನು ತೋರಿದ್ದು ಅದರ ಶ್ರೇಯಾಂಕವು ಕೂಡ ಮೇಲ್ದರ್ಜೆಗೆ ಏರಿದೆ. ಪ್ರಸ್ತಾಪ ಮಾಡಲೇಬೇಕಾದ ಇನ್ನೊಂದು ಸಂಗತಿ ಏನೆಂದರೆ 2022ರ ಹಣಕಾಸು ವರ್ಷಕ್ಕೆ ಮೊದಲ ತ್ರೈಮಾಸಿಕದಲ್ಲಿ ಭಾರತವು ಅತ್ಯುತ್ತಮವಾದ ಶೇ.20.1ರ ತ್ರೈಮಾಸಿಕ ಜಿಡಿಪಿ ಪ್ರಗತಿಯನ್ನು ದಾಖಲಿಸಿದೆ.**

**ಮಾರುಕಟ್ಟೆಯ ಆವರ್ತನ:** ಇಂತಹದೊಂದು ಆಟವನ್ನು ನಾವು ಅನೇಕ ಬಾರಿ ಗಮನಿಸಿದ್ದೇವೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ಹಣವನ್ನು ಹೂಡಿಕೆ ಮಾಡಲು ಹೆದರುತ್ತಿದ್ದ ಅನೇಕರು ಈಗ ಹೊಸದಾಗಿ ಹಣವನ್ನು ಹೂಡಿಕೆ ಮಾಡಲು ತುದಿಗಾಲಲ್ಲಿ ನಿಂತಿದ್ದಾರೆ. ಮೇಲಿನ ಒಂದು ಪಯಣದಲ್ಲಿ ಭಯ–ಭರವಸೆ–ದುರಾಸೆಯ ಮಾರುಕಟ್ಟೆಯ ಚಕ್ರವನ್ನು ಪ್ರತಿಯೊಬ್ಬರೂ ಕಾಣಬಹುದಾಗಿದೆ. ಹಳೆಯದೊಂದು ಮಾತಿದೆ; ನೀವು ಎಷ್ಟು ತರ್ಕಬದ್ಧರಾಗಿರುತ್ತೀರೋ ಮಾರುಕಟ್ಟೆ ಅಷ್ಟೇ ತರ್ಕರಹಿತವಾಗಿರಬಹುದು. ಈಗಿನ ಮಾರುಕಟ್ಟೆಯಲ್ಲಿನ ಗೂಳಿಯ ಓಟ ಆರಾಮದಾಯಕವಾಗಿದೆಯೇ, ಈ ಮಾರುಕಟ್ಟೆ ಕುಸಿತ ಕಾಣಬಹುದೇ ಇತ್ಯಾದಿ ಪ್ರಶ್ನೆಗಳಿಗೆ ಯಾರೊಬ್ಬರೂ ಉತ್ತರವನ್ನು ನೀಡಲು ಸಾಧ್ಯವಿಲ್ಲ. ಖ್ಯಾತ ಫಂಡ್ ನಿರ್ವಾಹಕ ಟೆರ್ರಿ ಸ್ಮಿತ್ ಅವರು ಹೇಳುವಂತೆ; "ಮಾರುಕಟ್ಟೆ ವಿಷಯಕ್ಕೆ ಬಂದಾಗ ಕೇವಲ ಎರಡು ವಿಧದ ಜನರು ಇರುತ್ತಾರೆ: (1) ಅದನ್ನು ಮಾಡಲಾಗದ ಜನರು ಮತ್ತು (2) ಅದನ್ನು ತಮ್ಮಿಂದ ಮಾಡಲಾಗದು ಎಂಬುದನ್ನು ತಿಳಿಯದ ಜನರು."

**ನಾವೀಗ ಏನು ಮಾಡಬೇಕು?:** ಅದೃಷ್ಟದ ಸಂಗತಿ ಎಂದರೆ ಆರಂಭದಿಂದಲೂ ನಮ್ಮ ಮಾತು ಮತ್ತು ನಡೆ ಯಾವತ್ತೂ ಬದಲಾಗಿಲ್ಲ. ಇಂದಿಗೂ ಅದು ಒಂದೇ ರೀತಿಯಲ್ಲಿದೆ. ಇಂತಹ ಮಾತುಗಳೆಲ್ಲವೂ ನಿಮ್ಮ ಕಿವಿ ಮೇಲೆ ಬೀಳುತ್ತಲೇ ಇದ್ದಿರಬಹುದು. ಯಾವುದೇ ಅತಿರಂಜಿತ ಕಥೆಗಳನ್ನು ಹೇಳುವುದನ್ನು ನಾವು ಯಾವತ್ತೂ ಇಷ್ಟಪಡುವುದಿಲ್ಲ. ಯಾವುದೇ ಅತಿಯಾದ ವಿವರಣೆಗಳನ್ನು ನೀಡಲು ಹೋಗದೆ ನಾವು ಹೇಳುವುದು ಏನೆಂದರೆ;

ಭಾರತದ ಪ್ರಗತಿಯ ಚಿತ್ರಣವಿದೆಯಲ್ಲ, ಅದು ಅತ್ಯಂತ ಸ್ಥಿರವಾಗಿದೆ ಮತ್ತು ಅದು ಭವಿಷ್ಯದಲ್ಲಿ ಇನ್ನಷ್ಟು ಬಲಗೊಳ್ಳಲಿದೆ. ಒಂದು ಸುಸ್ಥಿರ ಪ್ರಗತಿಯ ಚಿತ್ರಣಕ್ಕೆ ಅತ್ಯಗತ್ಯವಾದ ಎಲ್ಲ ಮೂಲಭೂತ ಸಂಗತಿಗಳು, ಪ್ರಜಾಪ್ರಭುತ್ವ, ಜನಸಂಖ್ಯಾಶಾಸ್ತ್ರ, ವ್ಯವಸ್ಥೆಗಳು, ಸಂಸ್ಥೆಗಳು ಇತ್ಯಾದಿಗಳೆಲ್ಲವೂ ಇದರಲ್ಲಿ ಅಡಕವಾಗಿವೆ.

ಮುಂಬರುವ ದಶಕಗಳಲ್ಲಿ ಈಕ್ವಿಟಿ ಆಸ್ತಿ ವರ್ಗವು ಇತರ ಎಲ್ಲ ಆಸ್ತಿ ವರ್ಗಗಳನ್ನು ಮೀರಿದ ಸಾಧನೆಯನ್ನು ಮಾಡಲಿದೆ. ಇದು ವಸ್ತುನಿಷ್ಠವಾದ, ತೆರಿಗೆ ನಂತರದ ಆದಾಯಗಳನ್ನು ಗಳಿಸಲು ಮತ್ತು ನಿಮ್ಮ ಸಂಪತ್ತನ್ನು ವೃದ್ಧಿಸಲು ನಿಶ್ಚಿತವಾಗಿ ಸಹಾಯ ಮಾಡುತ್ತದೆ. ಆದಾಯದ ವಿಚಾರದಲ್ಲಿಯೇ ಹೇಳಬೇಕೆಂದರೆ ಉತ್ತಮ ಫಂಡ್‌ಗಳು/ಕಂಪೆನಿಗಳಲ್ಲಿನ ಸಾಮಾನ್ಯ ಜಿಡಿಪಿ ಪ್ರಗತಿ (ನೈಜ ಜಿಡಿಪಿ ಪ್ರಗತಿ + ಹಣದುಬ್ಬರ)ಗಿಂತ ಉತ್ತಮ ಆದಾಯವನ್ನು ನಿರೀಕ್ಷೆ ಮಾಡಬಹುದು.

ಐದು ಮತ್ತು ಅದಕ್ಕಿಂತ ಹೆಚ್ಚಿನ ವರ್ಷಗಳಂತಹ ಸುದೀರ್ಘಾವಧಿ ಹೂಡಿಕೆಗೆ ಮಾತ್ರ ಈಕ್ವಿಟಿ ಆಸ್ತಿ ವರ್ಗವನ್ನು ಶಿಫಾರಸು ಮಾಡಬಹುದು. ಅವಧಿಯು ಕಡಿಮೆಯಾಗುತ್ತಿದ್ದಂತೆ ರಿಸ್ಕ್ ಪ್ರಮಾಣ ದೊಡ್ಡದಾಗುತ್ತದೆ ಮತ್ತು ಏರಿಳಿತ ಅಧಿಕವಾಗುತ್ತದೆ.

ವಿಭಿನ್ನವಾದ ಆಸ್ತಿ ವರ್ಗಗಳಾದ ಈಕ್ವಿಟಿ, ಸಾಲ, ಭೌತಿಕ ಆಸ್ತಿಗಳಾದ ಚಿನ್ನ, ರಿಯಲ್ ಎಸ್ಟೇಟ್ ಇತ್ಯಾದಿಗಳಿಗೆ ಆಸ್ತಿಗಳನ್ನು ಹಂಚಿಕೆ ಮಾಡುವುದು ಅತ್ಯಂತ ಯೋಗ್ಯವಾದ ಕಾರ್ಯತಂತ್ರವಾಗಿದೆ. ಕೊನೆಯದಾಗಿ, ಈಕ್ವಿಟಿಗಳಲ್ಲಿ ಹೂಡಿಕೆಯನ್ನು ಮಾಡಲು ಬಯಸುವವರು ಮ್ಯೂಚುಯಲ್ ಫಂಡ್‌ಗಳು ಮತ್ತು ಇತರ ಆಸ್ತಿ ವರ್ಗಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ಇದರಲ್ಲಿ ಅನೇಕ ಅನುಕೂಲಗಳಿವೆ.

ಸದ್ಯದ ಮಟ್ಟಿಗೆ ಆಸ್ತಿ ಹಂಚಿಕೆಯು ನಮಗೆ ಅತ್ಯಂತ ಸೂಕ್ತವಾದುದಾಗಿದೆ. ಈಕ್ವಿಟಿಗಳ ಮೇಲೆ ನಾವು ಹೆಚ್ಚಿನ ಭಾರವನ್ನು ಹಾಕಿದ್ದೇವೆಯೇ ಎಂಬುದನ್ನು ಪತ್ತೆ ಮಾಡಲು ಇದು ನಮಗೆ ಸಹಾಯ ಮಾಡುತ್ತದೆ. ಒಟ್ಟಾರೆಯಾಗಿ ಈಗಿನ ಕಾಲಘಟ್ಟದಲ್ಲಿ ಅತ್ಯಂತ ಸಮತೋಲಿತವಾದ ಆಸ್ತಿ ಹಂಚಿಕೆಯನ್ನು ಶಿಫಾರಸು ಮಾಡಬಹುದಾಗಿದೆ. ಇದರ ಜೊತೆಗೇ ರಿಸ್ಕ್‌ನ್ನು ಜೀರ್ಣಿಸಿಕೊಳ್ಳುವ ಶಕ್ತಿ ಎಷ್ಟು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು. ಹೂಡಿಕೆದಾರರಾಗಿ ನೀಡಬಹುದಾದ ಸಲಹೆ ಏನೆಂದರೆ, ನೀವು ನಿಮ್ಮ ಮ್ಯೂಚುಯಲ್ ಫಂಡ್ ವಿತರಕರು/ತಜ್ಞರ ಜೊತೆ ಮಾತುಕತೆಯನ್ನು ನಡೆಸಿ ಮತ್ತು ಇನ್ನಷ್ಟು ಮಾರ್ಗದರ್ಶನವನ್ನು ಪಡೆಯಿರಿ. ಉತ್ಪನ್ನಗಳ ಪರಿಶೋಧನೆಯಿಂದ ನಮ್ಮ ಆಸ್ತಿ ಹಂಚಿಕೆಯನ್ನು ಸುಲಭವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ.






# ಆಸ್ತಿ ಹಂಚಿಕೆ 101
## ಒಂದು ಮಾದರಿ ಮಾರ್ಗದರ್ಶಿ

ಇಂದಿನ ಹೂಡಿಕೆದಾರರ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು. ಎಲ್ಲ ಕಾಲದಲ್ಲೂ ಏರುಗತಿಯಲ್ಲಿಯೇ ಇರುವ ಮಾರುಕಟ್ಟೆ ಮತ್ತು ಧನಾತ್ಮಕವಾಗಿ ಕಾಣುವ ಆರ್ಥಿಕತೆಯ ಸಂದರ್ಭದಲ್ಲಿ ನಾವು ಮಾಡಬೇಕಾದ್ದಾದರೂ ಏನು? ಇದು ಪ್ರಮುಖವಾಗಿ ಕಾಡುವ ಪ್ರಶ್ನೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಬಹುದೊಡ್ಡ ಸಂಖ್ಯೆಯ ಹೊಸ ಹೂಡಿಕೆದಾರರು ಈಕ್ವಿಟಿ ಮಾರುಕಟ್ಟೆಗೆ ಪ್ರವೇಶ ಪಡೆದಿದ್ದಾರೆ. ಈ ಹೊಸ ಹೂಡಿಕೆದಾರರಲ್ಲಿ ಸಾಕಷ್ಟು ಮಂದಿ ಏರುಗತಿಯ ಮಾರುಕಟ್ಟೆಯನ್ನು ಮಾತ್ರ ನೋಡಿ-ದ್ದಾರೆ. ಬಹುಷಃ ಈ ಸಂದರ್ಭದಲ್ಲಿ ಆಸ್ತಿ ಹಂಚಿಕೆಯನ್ನು ಅರ್ಥ ಮಾಡಿಕೊಳ್ಳುವುದು ಸೂಕ್ತವಾಗಿದೆ.

**ಆಸ್ತಿ ಹಂಚಿಕೆ ಎಂದರೆ ಏನು?:** ಆಸ್ತಿ ಹಂಚಿಕೆ ಎಂದರೆ ಒಂದು ಹೂಡಿಕೆಯ ಬಂಡವಾಳ ಪಟ್ಟಿಯಲ್ಲಿರುವ ನಾನಾ ಆಸ್ತಿ ವರ್ಗಗಳ ಒಂದು ಭಾಗ. ಈಕ್ವಿಟಿಗಳು, ಬಾಂಡ್‌ಗಳು, ನಗದು ಮತ್ತು ಭೌತಿಕ ಆಸ್ತಿಗಳು ನಾನಾ ಸ್ವರೂಪದ ಆಸ್ತಿಗಳಾಗಿವೆ. ರಿಸ್ಕ್‌ಗಳನ್ನು ಸಮತೋಲನ ಮಾಡುವುದು, ರಿಸ್ಕ್‌ಗಳನ್ನು ಜೀರ್ಣಿಸಿಕೊಂಡು ಅದಕ್ಕೆ ತಕ್ಕುನಾದ ಆದಾಯಗಳನ್ನು ಗಳಿಸುವುದು ಮತ್ತು ಹಣಕಾಸು ಗುರಿಗಳನ್ನು, ಉದ್ದೇಶಗಳನ್ನು ಈಡೇರಿಸಿಕೊಳ್ಳುವುದು ಆಸ್ತಿ ಹಂಚಿಕೆಯ ಮುಖ್ಯ ಗು-ರಿಯಾಗಿದೆ. ದುರದೃಷ್ಟದ ಸಂಗತಿ ಎಂದರೆ ಭಾರತದಲ್ಲಿ ಅನೇಕ ಮಂದಿ ಹೂಡಿಕೆದಾರರು ಈ ಆಸ್ತಿ ಹಂಚಿಕೆಯನ್ನು ಈಗಲೂ ಸಮರ್ಪಕವಾಗಿ ಅನುಸರಿಸುತ್ತಿಲ್ಲ. ಹಾಗಾಗಿ ಬಂಡವಾಳದ ಪಟ್ಟಿಯು ಯಾವುದಾದರೂ ಒಂದು ಕಡೆ ಭಾರವಾಗಿರುತ್ತದೆ. ಹೂಡಿಕೆದಾರರು ಸಾಮಾನ್ಯವಾಗಿ ವಿಭಿನ್ನವಾದ ಆಸ್ತಿ ವರ್ಗಗಳನ್ನು ನೋಡುತ್ತಾರೆ. ವಿಶಾಲ ವ್ಯಾಪ್ತಿಯ, ತಮ್ಮ ಬಂಡವಾಳ ಪಟ್ಟಿಯ ಸಮಗ್ರ ಚಿತ್ರಣದ ಕಡೆಗೆ ಗಮನ ಹರಿಸುವುದಿಲ್ಲ. ಇದರಿಂದ ಸೂಕ್ತವಲ್ಲದ ಆಯ್ಕೆಗಳಿಗೆ ದಾರಿ ಮಾಡಿಕೊಡುತ್ತದೆ.





**ಆಸ್ತಿ ವರ್ಗದ ವಿಧಗಳು:** ಹೂಡಿಕೆ ಮಾಡಬಹುದಾದ ಹಲವು ರೀತಿಯ ಆಸ್ತಿ ವರ್ಗಗಳಿವೆ. ಪ್ರತಿಯೊಂದರಲ್ಲಿ ಅದರದ್ದೇ ಆದ ರಿಸ್ಕ್ ಹಾಗೂ ಆದಾಯದ ಸಾಧ್ಯತೆಗಳಿರುತ್ತವೆ. ಹೂಡಿಕೆದಾರರಾಗಿ ನಾವು ರಿಸ್ಕ್-ಆದಾಯ/ಈ ಆಸ್ತಿ ವರ್ಗಗಳ ಚಲನಶೀಲತೆಯನ್ನು ಅರ್ಥ ಮಾಡಿಕೊಳ್ಳಬೇಕು. ಈಗ ನಾವು ಪ್ರಮುಖ ಆಸ್ತಿ ವರ್ಗಗಳ ಬಗ್ಗೆ ಗಮನ ಹರಿಸೋಣ.

**ಈಕ್ವಿಟಿಗಳು:** ಕಂಪನಿಗಳಲ್ಲಿ ಇರುವ ಷೇರುಗಳು ಅಥವಾ ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿರುವ ಯೂನಿಟ್‌ಗಳನ್ನು ಸಾಮಾನ್ಯವಾಗಿ ನಾವು ಈಕ್ವಿಟಿಗಳೆಂದು ವರ್ಗೀಕರಿಸುತ್ತೇವೆ. ಆದಾಯವು ಮಾರುಕಟ್ಟೆಯನ್ನು ಆಧರಿಸಿದ್ದಾಗಿರುವ ಕಾರಣ ಮತ್ತು ಕಂಪನಿಗಳ ಕಾರ್ಯನಿರ್ವಹಣೆ ಹಾಗೂ ಮಾರುಕಟ್ಟೆಯ ಗ್ರಹಿಕೆಯನ್ನೂ ಅವಲಂಬಿಸಿರುವ ಕಾರಣ ಇಲ್ಲಿ ಆದಾಯದ ಬಗ್ಗೆ ಯಾವುದೇ ಗ್ಯಾರಂಟಿಯನ್ನು ನೀಡಲಾಗುವುದಿಲ್ಲ. ಮಾರುಕಟ್ಟೆಯಲ್ಲಿ ಅಲ್ಪಾವಧಿ ಹೂಡಿಕೆ ಅತ್ಯಂತ ಅಪಾಯಕಾರಿ. ಆದರೆ ನಾವು ಈ ಅವಧಿಯನ್ನು ಹೆಚ್ಚಿಸುತ್ತ ಹೋದ ಹಾಗೆ ರಿಸ್ಕ್ ಕೂಡ ಕಡಿಮೆಯಾಗುತ್ತ ಹೋಗುತ್ತದೆ ಮತ್ತು ಆದಾಯದ ಬಗ್ಗೆಯೂ ನಿಶ್ಚಿತವಾಗಿ ಹೇಳಬಹುದು ಹಾಗೂ ಅವು ಇತರ ಆಸ್ತಿ ವರ್ಗಗಳನ್ನೂ ಹಿಂದಿಕ್ಕುವ ಸಾಮರ್ಥ್ಯವನ್ನು ಹೊಂದಿವೆ. ಹಿಂದಿನ ಅನೇಕ ಉದಾಹರಣೆಗಳು ಇದನ್ನು ಸಾಬೀತು ಮಾಡುತ್ತವೆ ಕೂಡ.

**ಸಾಲ:** ಸಾಲ ಅಥವಾ ಬಾಂಡ್‌ಗಳು ರಿಸ್ಕ್ ಶ್ರೇಯಾಂಕದಲ್ಲಿ ಕೆಳ ಕ್ರಮಾಂಕದಲ್ಲಿವೆ ಮತ್ತು ನಿಶ್ಚಿತವಾದ ಆದಾಯಗಳನ್ನು ಅಥವಾ ಬಡ್ಡಿ ಪಾವತಿಗಳನ್ನು ಹೊಂದಿವೆ. ನಿಶ್ಚಿತವಾದ ಆದಾಯವನ್ನು ತಂದುಕೊಡುವ ಕಾರ್ಪೋರೇಟ್ ಬಾಂಡ್‌ಗಳು, ಸರ್ಕಾರಿ ಸೆಕ್ಯುರಿಟಿಗಳು, ನಿಶ್ಚಿತ ಠೇವಣಿಗಳು, ಸರ್ಕಾರದ ಸಣ್ಣ ಉಳಿತಾಯ ಯೋಜನೆಗಳು, ಪಿಂಚಣಿ ಫಂಡ್‌ಗಳು ಇತ್ಯಾದಿ ಅನೇಕ ರೀತಿಯ ಸಾಲದ ಸಾಧನಗಳಿವೆ. ಇದರೊಂದಿಗೆ ತಳಕು ಹಾಕಿಕೊಂಡಿರುವ ರಿಸ್ಕ್ ಅತ್ಯಂತ ಕಡಿಮೆ. ಹಾಗಂತ ಅವುಗಳು ಸಂಪೂರ್ಣ ಅಪಾಯದಿಂದ ಮುಕ್ತವಾಗಿವೆ ಎಂದು ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ ತಾನಾಗಿಯೇ ಬಡ್ಡಿ ಪಾವತಿ ಮತ್ತು ಪ್ರಿನ್ಸಿಪಲ್ ಮೊತ್ತ ಕೂಡ ಪಾವತಿಯಾಗಿ ಬಿಡಬಹುದು. ಜೊತೆಗೆ ಮಾರುಕಟ್ಟೆಯಲ್ಲಿ ಬಡ್ಡಿ ದರಗಳ ಬದಲಾವಣೆ ಮಾಡಿರುವ ಕಾರಣಕ್ಕೆ ನಿಮ್ಮ ಸಾಲದ ಬಂಡವಾಳದ ಪಟ್ಟಿಯ ಮೌಲ್ಯದಲ್ಲಿಯೇ ಬದಲಾವಣೆಯಾಗುವ ಅಪಾಯವಿರುತ್ತದೆ.

**ಭೌತಿಕ ಆಸ್ತಿಗಳು:** ಭೌತಿಕ ಆಸ್ತಿಗಳಲ್ಲಿ ಪ್ರಮುಖವಾಗಿರುವುದು ಎಂದರೆ ರಿಯಲ್ ಎಸ್ಟೇಟ್ ಮತ್ತು ಚಿನ್ನ. ಭಾರತೀಯರಂತೂ ಇವುಗಳ ಬಗ್ಗೆ ಅತಿಯಾಗಿ ತಮ್ಮನ್ನು ತಾವು ತೆರೆದುಕೊಂಡಿದ್ದಾರೆ ಎಂದರೆ ಅಚ್ಚರಿಯಿಲ್ಲ. ದುರದೃಷ್ಟದ ಸಂಗತಿ ಎಂದರೆ, ಹೂಡಿಕೆದಾರರ ಸಮಗ್ರ ಹೂಡಿಕೆಯ ಬಂಡವಾಳದ ಪಟ್ಟಿಯನ್ನು ಗಮನಿಸಿದಾಗ ಇದನ್ನು ಹೂಡಿಕೆಯ ಉದ್ದೇಶದಿಂದ ಪರಿಗಣಿಸಲಾಗುವುದಿಲ್ಲ. ಈಕ್ವಿಟಿಗಳು ಮತ್ತು ಸಾಲಕ್ಕೆ ಹೋಲಿಸಿದಾಗ ಅವರು ಈ ಆಸ್ತಿಗಳ ಆದಾಯವನ್ನು ಲೆಕ್ಕ ಹಾಕುತ್ತಾರೆ ಮತ್ತು ಹೋಲಿಕೆ ಮಾಡಿ ನೋಡುತ್ತಾರೆ ಎಂಬುದು ಮುಖ್ಯವಾಗುತ್ತದೆ. ಹೆಚ್ಚಿನ ಪ್ರಮಾಣದ ರಿಸ್ಕ್ ಇರುವುದು ಲಿಕ್ವಿಡಿಟಿ, ಕಾಸ್ಟ್ ಆಫ್ ಕ್ಯಾರಿಂಗ್ ಅಥವಾ ನಿರ್ವಹಣೆ ಮತ್ತು ಇತರ ಭೌತಿಕ/ಒಡೆತನದಲ್ಲಿ. ಈ ಆಸ್ತಿಗಳು ಅತ್ಯಂತ ಕಡಿಮೆ ಗಳಿಕೆಯನ್ನು ತಂದುಕೊಡುತ್ತದೆ.

**ನಗದು:** ಅತ್ಯಂತ ಕಡಿಮೆ ರಿಸ್ಕ್ ಇರುವುದು ನಗದಿನಲ್ಲಿ. ಆದರೆ ಅದು ಯಾವುದೇ ಆದಾಯವನ್ನು ಹುಟ್ಟು ಹಾಕುವುದಿಲ್ಲ. ಅದನ್ನು ಬಳಸದೇ ಹಾಗೇ ಇಟ್ಟಾಗ ಹಣದುಬ್ಬರದ ಕಾರಣದಿಂದ ಕಾಲ ಕ್ರಮೇಣ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತ ಹೋಗುತ್ತದೆ. ಸಾಮಾನ್ಯವಾಗಿ ತುರ್ತು ಅವಶ್ಯಕತೆಗಳಿಗಾಗಿ, ನಿಯಮಿತವಾದ ವೆಚ್ಚಗಳಿಗೆ ನಗದು ಹಣವನ್ನು ಕೂಡಿಡುತ್ತೇವೆ.

**ಆಸ್ತಿ ಹಂಚಿಕೆ ಯಾಕೆ ಮುಖ್ಯ?:** ಸೂಕ್ತವಾದ ರೀತಿಯಲ್ಲಿ ಆಸ್ತಿ ಹಂಚಿಕೆಯನ್ನು ಮಾಡುವ ನಿರ್ಧಾರದಲ್ಲಿ ಬಹಳ ದೊಡ್ಡ ಪ್ರಮಾಣದ ರಿಸ್ಕ್ ಇರುತ್ತದೆ. ಅದು ನಿಮ್ಮ ಹೂಡಿಕೆಯ ವ್ಯಾಪ್ತಿಗೆ ತಕ್ಕಂತೆ ನಿಮ್ಮ ಆದಾಯದ ನಿರೀಕ್ಷೆಗಳನ್ನು ಅಥವಾ ಗುರಿಗಳನ್ನು ಪೂರ್ಯಸಬೇಕಾಗುತ್ತದೆ. ಆಸ್ತಿಗಳನ್ನು ಹಂಚಿಕೆ ಮಾಡುವುದು ಯಾಕೆ ಮುಖ್ಯ ಎನ್ನುವುದಕ್ಕೆ ಒಂದಷ್ಟು ಕಾರಣಗಳನ್ನು ಇಲ್ಲಿ ನೀಡಲಾಗಿದೆ.



**ಹೂಡಿಕೆದಾರನ ನಡವಳಿಕೆ:** ನೀವು ಮಾಡಿರುವ ಹೂಡಿಕೆಯ ಫಲಿತಾಂಶಗಳ ಮೇಲೆ ಬಹುದೊಡ್ಡ ಪರಿಣಾಮ ಬೀರುವುದು ಹೂಡಿಕೆದಾರನ ನಡವಳಿಕೆ. ಭಯ, ಭರವಸೆ, ದುರಾಸೆ ಇತ್ಯಾದಿ ಭಾವನೆಗಳು ನಮ್ಮ ಹೂಡಿಕೆ ನಿರ್ಧಾರಗಳನ್ನು ಕೆಡಿಸಿಬಿಡುತ್ತವೆ ಮತ್ತು ಅಂತಿಮವಾಗಿ ನಾವು ಪೂರ್ವಗ್ರಹರಹಿತ ಮತ್ತು ಭಾವನಾತ್ಮಕವಾದ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ. ಇಂತಹ ತರ್ಕರಹಿತವಾದ ಕ್ರಮಗಳು ನಮ್ಮ ಹಣಕಾಸಿನ ಹಿತಾಸಕ್ತಿಗಳ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತವೆ. ಆಸ್ತಿ ಹಂಚಿಕೆ ಆಧಾರಿತವಾದ ವಿಧಾನವು ಹೂಡಿಕೆಯಿಂದ ಭಾವನೆಗಳನ್ನು ದೂರವಿಡುವಂತೆ ಮಾಡುತ್ತದೆ ಮತ್ತು ನಿಮ್ಮನ್ನು ಶಿಸ್ತಿನಿಂದ ಇರುವಂತೆ, ವಿಷಯ ಕೇಂದ್ರಿತವಾಗಿ ಇರುವಂತೆ ಮಾಡುತ್ತದೆ.

**ಹೂಡಿಕೆ ಫಲಿತಾಂಶಗಳ ಚಾಲಕರು:** ಸಾಮಾನ್ಯವಾಗಿ ನಾವು ಹಣ ಗಳಿಸಲು ಉತ್ತಮವಾದ ಫಂಡ್, ಉತ್ತಮವಾದ ಷೇರುಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಮಾರುಕಟ್ಟೆಯ ಸಮಯವನ್ನು ನೋಡಬೇಕು ಎಂದು ನಂಬಿಕೊಂಡಿರುತ್ತೇವೆ. ಆದರೆ ವಿಶಾಲವಾದ ಚಿತ್ರ ನೋಡುವುದನ್ನು ಮರೆತಿರುತ್ತೇವೆ. ನಿಮ್ಮ ಒಟ್ಟಾರೆ ಬಂಡವಾಳದ ಪಟ್ಟಿಯಲ್ಲಿ ಅದು ಕೇವಲ ಒಂದಂಶವಾಗಿದ್ದರೆ, ನಿಮಗೆ ಲಾಭವನ್ನು ತಂದುಕೊಟ್ಟಿರುವ ಫಂಡ್ ಮೇಲಿನ ಶೇ.100ರಷ್ಟು ಆದಾಯ ಕೂಡ ದೊಡ್ಡ ಸಂಗತಿಯಾಗುವುದಿಲ್ಲ. ಕುತೂಹಲದ ವಿಚಾರವೆಂದರೆ ಆಸ್ತಿ ಹಂಚಿಕೆಯೊಂದೇ ಅತ್ಯಂತ ಪ್ರಮುಖ ಅಂಶ ಅಥವಾ ಬಂಡವಾಳ ಪಟ್ಟಿಯ ಕಾರ್ಯನಿರ್ವಹಣೆಗೆ ಮುಖ್ಯವಾದ ಕೊಡುಗೆಯನ್ನು ನೀಡುತ್ತದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಒಂದು ಸಂಶೋಧನೆಯ ಪ್ರಕಾರ ಬಂಡವಾಳ ಪಟ್ಟಿಯ ಕಾರ್ಯನಿರ್ವಹಣೆಗೆ ಏನು ಕಾರಣ ಎಂಬುದನ್ನು ಇಲ್ಲಿ ನೀಡಲಾಗಿದೆ:



| | |
|---|---|
| ಆಸ್ತಿ ಹಂಚಿಕೆ | 91.5% |
| ಸೆಕ್ಯುರಿಟಿ ಆಯ್ಕೆ | 4.6% |
| ಮಾರುಕಟ್ಟೆ ಸಮಯ | 1.8% |
| ಇತರ ಅಂಶಗಳು | 2.1 |


**ವಿಜಯಿಗಳು ಬದಲಾಯಿಸುತ್ತಲೇ ಇರುತ್ತಾರೆ:** ಪ್ರತಿಯೊಂದು ಆಸ್ತಿ ವರ್ಗ ಕೂಡ ಭಿನ್ನವಾದ ರಿಸ್ಕ್ ಮತ್ತು ಆದಾಯದ ಗುಣಗಳನ್ನು ಹೊಂದಿರುತ್ತದೆ ಮತ್ತು ಭಿನ್ನ ಆಸ್ತಿ ವರ್ಗಗಳು ಹೂಡಿಕೆ/ಆರ್ಥಿಕ ಚಕ್ರದ ನಾನಾ ಹಂತಗಳು ಅಥವಾ ಕಾಲದಲ್ಲಿ ಅತ್ಯುತ್ತಮ ಅಥವಾ ಕಳಪೆ ಕಾರ್ಯನಿರ್ವಹಣೆಯನ್ನು ತೋರಬಹುದು. ಸಮರ್ಪಕವಾದ ರೀತಿಯಲ್ಲಿ ಆಸ್ತಿ ಹಂಚಿಕೆಯನ್ನು ಮಾಡಿದರೆ ಭಿನ್ನವಾದ ಮಾರುಕಟ್ಟೆ ಪರಿಸ್ಥಿತಿಯಲ್ಲಿ ನಿಮ್ಮ ಬಂಡವಾಳದ ಪಟ್ಟಿಯಲ್ಲಿ ಒಂದು ಮಟ್ಟಿನ ಸ್ಥಿರತೆಯ ಖಾತರಿಯನ್ನು ನೀಡಬಹುದು ಮತ್ತು ಹೂಡಿಕೆ ಚಕ್ರದ ಲಾಭವನ್ನು ಪಡೆದು–ಕೊಂಡು ಅದ್ಭುತವಾದ ಆದಾಯವನ್ನು ಗಳಿಸಬಹುದು. ಒಂದು ಆಸ್ತಿಯು ಅತ್ಯುತ್ತಮವಾದ ನಿರ್ವಹಣೆಯನ್ನು ತೋರಿದ–ರೆ, ಬಂಡವಾಳ ಪಟ್ಟಿಯಲ್ಲಿನ ಅದರ ಪಾಲು ಹೆಚ್ಚಾದರೆ, ಆಗ ಅದರಲ್ಲಿನ ಕೆಲವು ಅಂಶಗಳು ಇತರ ಆಸ್ತಿ ವರ್ಗಗಳಿಗೆ ವರ್ಗಾವಣೆ ಹೊಂದಿರುತ್ತವೆ ಎಂದು ಅರ್ಥ. ಸಾಮಾನ್ಯವಾಗಿ ಆಗಾಗ ನಡೆಸುವ ಮರು ಹೊಂದಾಣಿಕೆಯ ಭಾಗವಾಗಿ ಇದನ್ನು ಸಾಧಿಸಬಹುದು. ನಾವು ಇಲ್ಲಿ ನಾನಾ ಆಸ್ತಿ ವರ್ಗಗಳ ನಡುವೆ ಅವುಗಳ ಮೂಲ ಭಾಗಕ್ಕೆ ಮರುಹೊಂದಾಣಿಕೆ ಮಾಡಬಹುದು. ಹೀಗೆ ಮರುಹೊಂದಾಣಿಕೆ ಕಾರ್ಯವನ್ನು ಕೈಗೊಳ್ಳದೇ ಹೋದರೆ



ಆಸ್ತಿ ಹಂಚಿಕೆಯು ಉದ್ದೇಶಿತ ಹಂಚಿಕೆಯಿಂದ ದಾರಿ ತಪ್ಪುವ ಆ ಮೂಲಕ ರಿಸ್ಕ್ ಪ್ರಮಾಣ ಹೆಚ್ಚಾಗುವ ಹಾಗೂ ಆದಾಯದ ಸಾಧ್ಯತೆ ಕೂಡ ತಗ್ಗುವ ಸಂಭವ ಇರುತ್ತದೆ.

**ಆಸ್ತಿ ಹಂಚಿಕೆಯನ್ನು ನಿಭಾಯಿಸುವುದು ಹೇಗೆ?:** ಆಸ್ತಿ ಹಂಚಿಕೆಯ ಬಗ್ಗೆ ನಿರ್ಧಾರ ಕೈಗೊಳ್ಳುವುದು ಅತ್ಯಂತ ನಿರ್ಣಾಯಕ. ನಿಮ್ಮ ಕಾಲಮಿತಿ, ರಿಸ್ಕ್‌ನ್ನು ಜೀರ್ಣಿಸಿಕೊಳ್ಳುವ ಶಕ್ತಿ ಅಥವಾ ಸಹನಾ ಮಟ್ಟ ಮತ್ತು ರಿಸ್ಕ್ ಮತ್ತು ಆದಾಯದ ನಡುವಿನ ಹೊಂದಾಣಿಕೆಯಂತಹ ಅಂಶಗಳು ನಿಮ್ಮ ಆಸ್ತಿ ಹಂಚಿಕೆಯಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಒಂದು ವೇಳೆ ನೀವು ನಿಮ್ಮ ಗುರಿಗಳನ್ನು ನಿರ್ಧರಿಸಿದ್ದರೆ ಆಗ ಮತ್ತೊಮ್ಮೆ ಆದಾಯದ ಅಗತ್ಯಗಳು ಅಥವಾ ನಿರೀಕ್ಷೆಗಳು ನಿಮ್ಮ ಆಯ್ಕೆಯ ಮೇಲೆ ಅಗಾಧವಾದ ಪ್ರಭಾವವನ್ನು ಬೀರಬಹುದು. ಇವೆಲ್ಲದರ ಜೊತೆಗೆ ಆಸ್ತಿ ಹಂಚಿಕೆಯನ್ನು ಎರಡು ವಿಶಾಲ ವಿಧಾನಗಳಲ್ಲಿ ಅನುಸರಿಸಬಹುದು.

**ನಿಶ್ಚಿತ ಆಸ್ತಿ ಹಂಚಿಕೆ:** ಮಾರುಕಟ್ಟೆಯ ಪರಿಸ್ಥಿತಿಗಳು ಏನೇ ಇದ್ದರೂ ಕೂಡ ನಿಶ್ಚಿತ ಹಂಚಿಕೆಯ ನಿರ್ಧಾರದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ರಿಸ್ಕ್‌ನ್ನು ಜೀರ್ಣಿಸಿಕೊಳ್ಳುವ ಅಥವಾ ಜೀವನದ ಹಂತಗಳು ಅಥವಾ ಜೀವನದ ಇತರ ಯಾವುದೇ ಘಟನೆಯಲ್ಲಿ ಬದಲಾವಣೆಯಾದರೆ ಇಲ್ಲಿಯೂ ಸಾಮಾನ್ಯವಾಗಿ ಬದಲಾವಣೆಯಾಗುತ್ತದೆ. ಉದಾಹರಣೆಗೆ ಈಕ್ವಿಟಿ ಶೇ.50 ಮತ್ತು ಸಾಲ ಶೇ.50.




## ಒಟ್ಟಾರೆಯಾಗಿ

**ಆಸ್ತಿ ಹಂಚಿಕೆಯು ನಿಮ್ಮ ಹೂಡಿಕೆಯ ಬಂಡವಾಳದ ಪಟ್ಟಿಯನ್ನು ನಿಭಾಯಿಸಲು ಕಾರ್ಯತಂತ್ರವನ್ನು ರೂಪಿಸುತ್ತದೆ. ಈ ಆಸ್ತಿ ಹಂಚಿಕೆಯು (ಎ) ನಾನಾ ಈಕ್ವಿಟಿ ಮತ್ತು ಸಾಲದ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೂಲಕ ನೇರವಾಗಿ ನಿಮ್ಮ ಬಂಡವಾಳದ ಪಟ್ಟಿಯನ್ನು ನಿಭಾಯಿಸುವುದು ಅಥವಾ (ಬಿ) ಆಸ್ತಿ ಹಂಚಿಕೆಯನ್ನು ಸ್ವಯಂಚಾಲಿತವಾಗಿ ನಿಭಾಯಿಸುವಂತಹ ಒಂದೇ ಒಂದು ಫಂಡ್‌ನಲ್ಲಿ/ಸಿದ್ಧವಿರುವ ಬಂಡವಾಳದ ಪಟ್ಟಿಯಲ್ಲಿ ಹೂಡಿಕೆಯನ್ನು ಮಾಡುವುದರ ಮೂಲಕ ನಿರ್ವಹಿಸಬಹುದಾಗಿದೆ. ಒಂದೇ ಒಂದು ಫಂಡ್ ನಿಭಾಯಿಸುವಂತಹ ಎರಡನೇ ಆಯ್ಕೆಯನ್ನು ಮಾಡಿಕೊಳ್ಳುವುದು ಕಾರ್ಯನಿರ್ವಹಣೆಯ ದೃಷ್ಟಿಯಿಂದ ಸುಲಭ ಹಾಗೂ ತೆರಿಗೆ ಉಳಿತಾಯವನ್ನೂ ಮಾಡಬಹುದಾಗಿದೆ; ಯಾಕೆಂದರೆ ಇಲ್ಲಿ ನೀವು ಯಾವುದೇ ಮಾರಾಟ ಮತ್ತು ಖರೀದಿಯನ್ನು ಮಾಡುವುದಿಲ್ಲ ಹಾಗೂ ಆ ಮೂಲಕ ಬಂಡವಾಳ ಗಳಿಕೆಯನ್ನು ತಪ್ಪಿಸಬಹುದು. ಈಕ್ವಿಟಿ ಮತ್ತು ಸಾಲದ ನಡುವೆ ಅತ್ಯಂತ ಚತುರತೆಯಿಂದ ಆಸ್ತಿಯನ್ನು ಹಂಚಿಕೆ ಮಾಡುವ ಸಮತೋಲನದಿಂದ ಕೂಡಿದ ಫಂಡ್‌ಗಳನ್ನು "ಹೈಬ್ರೀಡ್ ಫಂಡ್ಸ್" ಅಥವಾ "ಸಮತೋಲಿತ ಫಂಡ್ಸ್" ಎಂದು ಕರೆಯಬಹುದು. ಇದನ್ನು ಹೂಡಿಕೆದಾರರೇ ಕಂಡುಕೊಳ್ಳಬಹುದು ಮತ್ತು ತಮ್ಮ ಬಂಡವಾಳ ಪಟ್ಟಿಯ ಒಂದು ಭಾಗವನ್ನು ಹಂಚಿಕೆ ಮಾಡಬಹುದು.**

## ಚಲನಶೀಲ ಆಸ್ತಿ ಹಂಚಿಕೆ

**ಇಲ್ಲಿ ಅಪಾಯದ ವ್ಯಾಪ್ತಿಯೇ ದೊಡ್ಡದು. ಅದಕ್ಕೆ ತಕ್ಕಂತೆ ಆಸ್ತಿ ಹಂಚಿಕೆಯ ಶ್ರೇಣಿಯನ್ನು ನಿರ್ಧರಿಸಬೇಕಾಗುತ್ತದೆ. ಮಾರುಕಟ್ಟೆಯ ಪರಿಸ್ಥಿತಿಯ ಆಧಾರದಲ್ಲಿ ಅದಕ್ಕೆ ಹೇಗೆ ನಮ್ಮನ್ನು ನಾವು ತೆರೆದುಕೊಳ್ಳಬೇಕು ಎಂಬುದನ್ನು ತೀರ್ಮಾನಿಸಲಾಗುತ್ತದೆ. ಮಾರುಕಟ್ಟೆಯು ತೀವ್ರಗತಿಯಲ್ಲಿ ಮುನ್ನಡೆಯುತ್ತಿರುವ ಸಂದರ್ಭದಲ್ಲಿಯೇ ಅದರ ಪ್ರಯೋಜನ ಪಡೆದು ಅತ್ಯುತ್ತಮವಾದ ಲಾಭ ಗಳಿಸುವುದು ಇಲ್ಲಿನ ಉದ್ದೇಶ. ಉದಾಹರಣೆಗೆ, ರಿಸ್ಕ್‌ನ್ನು ಜೀರ್ಣಿಸಿಕೊಳ್ಳುವುದು ಮತ್ತು ಅದಕ್ಕೆ ತಕ್ಕಂತೆ ಈಕ್ವಿಟಿಗೆ ತೆರೆದುಕೊಳ್ಳುವುದನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸಬಹುದು– ಆಕ್ರಮಣಶೀಲತೆ (60ರಿಂದ100%), ಮಧ್ಯಮ (40ರಿಂದ70%) ಮತ್ತು ಸಾಂಪ್ರದಾಯಿಕ (0–40%).**




# ಗೃಹ ವಿಮೆ
## ನಿಮ್ಮ ಕನಸಿನ ಸೌಧಕ್ಕೆ
# ಸುರಕ್ಷಾ ಕವಚ

ಸ್ವಂತ ಮನೆಯನ್ನು ಹೊಂದುವುದು ಪ್ರತಿಯೊಬ್ಬರ ಪಾಲಿನ ಕನಸು. ತಮ್ಮದೇ ಆದ ಮನೆಯಲ್ಲಿ ಜೀವನ ನಡೆಸುವುದು ಅನೇಕರಿಗೆ ಹೆಮ್ಮೆ ಮತ್ತು ಸಾಮಾಜಿಕ ಗೌರವದ ಸಂಕೇತ. ಮನೆ ಎನ್ನುವುದು ನಮ್ಮ ಜೀವನದಲ್ಲಿ ಅತ್ಯಂತ ಪ್ರಮುಖವಾದ ಆಸ್ತಿ. ನಮ್ಮೆಲ್ಲ ದುಡಿಮೆಯನ್ನು ಸುರಿಸಿ ಸೃಷ್ಟಿಸುವ ಬಹುದೊಡ್ಡ ಸ್ವತ್ತು. ಎಲ್ಲಕ್ಕಿಂತ ಮುಖ್ಯವಾಗಿ ಭಾರತದ ನಗರಗಳಲ್ಲಿ ಅದರಲ್ಲೂ ವಿಶೇಷವಾಗಿ ಮಹಾನಗರಗಳಲ್ಲಿ ಆಸ್ತಿಯ ಬೆಲೆ ವಿಶ್ವದಲ್ಲಿಯೇ ಅತ್ಯಂತ ದುಬಾರಿ. ನಮ್ಮಲ್ಲಿ ಬಹುತೇಕ ಮಂದಿ ತಮ್ಮ ಜೀವನದ ಗಳಿಕೆಯನ್ನು ಮನೆ ಕಟ್ಟುವುದಕ್ಕಾಗಿ ವ್ಯಯ ಮಾಡುತ್ತಿರುವುದು ಮಾತ್ರವಲ್ಲದೆ ಮನೆಯ ನವೀಕರಣ ಮತ್ತು ಒಳಾಂಗಣದ ಮೇಲೆ ನಮ್ಮ ಭವಿಷ್ಯವನ್ನೇ ಕಳೆಯುತ್ತಾರೆ. ನಮ್ಮ ಮನೆಗಳು ಇಂದು ಎಲ್ಲ ಬಗೆಯ ಅಮೂಲ್ಯ ವಸ್ತುಗಳು (ಚಿನ್ನ/ಆಭರಣಗಳು ಸೇರಿ) ಮತ್ತು ದುಬಾರಿ ಉಪಕರಣಗಳು, ಎಲೆಕ್ಟ್ರಾನಿಕ್ ಸಾಧನಗಳು, ಅಲಂಕಾರಿಕ ಉಪಕರಣಗಳಿಂದ ತುಂಬಿ ಹೋಗಿವೆ. ಒಟ್ಟಾರೆಯಾಗಿ ನಮ್ಮ ಮನೆಗಳಿಗಾಗಿ ನಾವು ಅತಿಯಾದ ಹೂಡಿಕೆಯನ್ನು ಮಾಡುತ್ತಿದ್ದೇವೆ. ಅದು ಕೇವಲ ನಮ್ಮ ಭಾವನೆಗೆ ಸಂಬಂಧಿಸಿದ್ದು ಮಾತ್ರವಾಗಿರುವುದಿಲ್ಲ ಎನ್ನುವುದನ್ನು ಗಮನಿಸಬೇಕು.

ನಮ್ಮ ಜೀವನದ ಅತ್ಯಮೂಲ್ಯವಾದ ಯಾವುದೇ ಆಸ್ತಿಯನ್ನು ಖರೀದಿಸಿದಾಗ ಅದರ ಸುರಕ್ಷತೆ ಮತ್ತು ಭದ್ರತೆಯ ಬಗ್ಗೆ ನಾವು ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕಾಗುತ್ತದೆ. ದುರಾದೃಷ್ಟದ ಸಂಗತಿ ಎಂದರೆ ಭಾರತದಲ್ಲಿ ಗೃಹ ವಿಮೆಯ ಬಗ್ಗೆ ಸಾಕಷ್ಟು ಅರಿವಿನ ಕೊರತೆ, ನಿರ್ಲಕ್ಷ್ಯ ಮತ್ತು ಆಧಾರ ರಹಿತವಾದ ನಿರ್ವಹಣೆಯನ್ನು ಕಾಣುತ್ತಿದ್ದೇವೆ. ಇದು ನಿಜಕ್ಕೂ ವಿರೋಧಾಭಾಸದ ಸಂಗತಿ. ನಮ್ಮ ಆಸ್ತಿಗೆ ಮತ್ತು ನಮ್ಮ ಸ್ವತ್ತುಗಳಿಗೆ ಎದುರಾಗುವ ಅಪಾಯಗಳ ಬಗ್ಗೆ ನಮಗೆ ಸಾಕಷ್ಟು ಅರಿವಿದೆ. ಕಳೆದ ಒಂದು ದಶಕದ ಅವಧಿಯಲ್ಲಿ ಅತ್ಯಂತ ಹೆಚ್ಚು ನೈಸರ್ಗಿಕ ವಿಕೋಪಗಳಿಗೆ ಗುರಿಯಾದ ಐದು ಬಹುಮುಖ್ಯ ರಾಷ್ಟ್ರಗಳಲ್ಲಿ ಭಾರತವೂ ಒಂದು. ಪ್ರವಾಹ, ಭೂಕಂಪ, ಸುನಾಮಿ ಇತ್ಯಾದಿ ಪ್ರಕೃತಿ ವಿಕೋಪಗಳಿಗೆ ಹೆಚ್ಚು ಗುರಿಯಾಗುವ ಸಾಕಷ್ಟು ಪ್ರದೇಶಗಳು, ವಲಯಗಳು ನಮ್ಮಲ್ಲಿವೆ. ಇಷ್ಟು ಮಾತ್ರವಲ್ಲದೆ ನೀವು ಎಲ್ಲಿಯೇ ವಾಸಿಸುತ್ತಿದ್ದರೂ ಅಗ್ನಿ ದುರಂತ, ಕಳವು, ದರೋಡೆ, ಗಲಭೆ, ಅಪಘಾತಗಳು ಇತ್ಯಾದಿ ಅಪಾಯಗಳು ಇದ್ದೇ ಇರುತ್ತವೆ. ಇಂತಹ ಮಿತಿ ಇರದ ಅಪಾಯಗಳ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಗೃಹ ವಿಮೆಯ ಅಗತ್ಯ ಮತ್ತು ಮಹತ್ವವನ್ನು ಮನಗಾಣುವುದು ಅತ್ಯಗತ್ಯ.

**ಗೃಹ ವಿಮಾ ಪಾಲಿಸಿ ಎಂದರೆ ಏನು?:** ಮನೆ, ಅಪಾರ್ಟ್‌ಮೆಂಟು, ಬಂಗಲೆಗಳಲ್ಲಿ ವಾಸಿಸುವ ಜನ ತಮ್ಮ ಸುರಕ್ಷತೆಗಾಗಿ ಮಾಡಿಕೊಳ್ಳುವ ಒಂದು ವ್ಯವಸ್ಥೆ ಇದು. ಇದನ್ನು ಸರಳವಾಗಿ ನಾವು ಗೃಹ ವಿಮಾ ಪಾಲಿಸಿ ಎಂದು ಕರೆಯುತ್ತೇವೆ. ಇದು ಮನೆ ಮಾಲೀಕರು ಮತ್ತು ವಿಮಾದಾರರ ನಡುವೆ ನಡೆಯುವ ಒಪ್ಪಂದ. ನಿಮ್ಮ ಮನೆ ಮತ್ತು ಅದರಲ್ಲಿರುವ ಯಾವುದೇ ಸ್ವತ್ತು ಅನಿರೀಕ್ಷಿತ ಘಟನೆಗಳಿಂದ ನಾಶ ಹೊಂದಿದರೆ ಅಥವಾ ಅವುಗಳಿಗೆ ಹಾನಿ ಸಂಭವಿಸಿದರೆ ಅದಕ್ಕೆ ರಕ್ಷಣೆಯನ್ನು ನೀಡುವುದು ಈ ಪಾಲಿಸಿಯ ಉದ್ದೇಶ. ಭಿನ್ನ-ವಿಭಿನ್ನವಾದ ಯೋಜನೆಗಳು ಮತ್ತು ಸೌಲಭ್ಯಗಳನ್ನು ಒದಗಿಸುವ ಸಾಕಷ್ಟು ಸಂಖ್ಯೆಯ ಗೃಹ ವಿಮಾ ಪೂರೈಕೆದಾರರು ಇವತ್ತು ಮಾರುಕಟ್ಟೆಯಲ್ಲಿದ್ದಾರೆ. ನಿಮ್ಮ ಅಗತ್ಯಗಳಿಗೆ ಯಾವುದು ಉತ್ತಮ ಮತ್ತು ಯಾವುದು ಸರಿಯಾಗಿ ಹೊಂದಾಣಿಕೆಯಾಗುತ್ತದೆ ಎಂಬುದನ್ನು ಗಮನಿಸಿ ಸೂಕ್ತವಾದ ಪಾಲಿಸಿಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ನಿಮಗಿದೆ. ಗೃಹ ವಿಮಾ ಪಾಲಿಸಿಯಲ್ಲಿ ಸಮಗ್ರ ಸ್ವರೂಪದ ಪಾಲಿಸಿಗಳಿದ್ದು, ಮನೆ ಮಾಲೀಕರು ಎದುರಿಸುವ ತುರ್ತು ಪರಿಸ್ಥಿತಿಗಳಿಗೆ ಅನುಗುಣವಾಗಿ ಇದನ್ನು ರೂಪಿಸಲಾಗಿರುತ್ತದೆ. ಇಂತಹ ಸಮಗ್ರ ಪಾಲಿಸಿಯು ನಾನಾ ವಿಭಾಗಗಳನ್ನು ಒಳಗೊಂಡಿರುತ್ತವೆ. ಈ ಪಾಲಿಸಿಯನ್ನು ಗ್ರಾಮೀಣ ಪ್ರದೇಶ/ಪಟ್ಟಣ-ನಗರ (ಮಹಾನಗರಗಳು ಸೇರಿ) ದಲ್ಲಿರುವ ಮನೆ ಮಾಲೀಕರು, ಅಪಾರ್ಟ್‌ಮೆಂಟ್‌ಗಳ ಬಾಡಿಗೆದಾರರು, ಹೌಸಿಂಗ್ ಸೊಸೈಟಿಗಳು, ಅಪಾರ್ಟ್‌ಮೆಂಟ್‌ಗಳು, ಬಂಗ್ಲೆಗಳು, ಸಾಲು ಮನೆಗಳಿಗೆ ನೀಡಬಹುದಾಗಿದೆ.



**ಅಗ್ನಿ ಮತ್ತು ಅದಕ್ಕೆ ಸಂಬಂಧಿಸಿದ ಅಪಾಯ:** ಗೃಹ ವಿಮಾ ಪಾಲಿಸಿಯಲ್ಲಿ ಲಭ್ಯವಿರುವ ಅತ್ಯಂತ ಪ್ರಮುಖ ಐಚ್ಛಿಕ ವಿಮಾ ಸೌಲಭ್ಯ ಇದಾಗಿದೆ. ಇದನ್ನು ಇನ್ನೂ ಎರಡು ವಿಭಾಗಗಳಾಗಿ ಮಾಡಬಹುದು.

**ಮನೆ ನಿರ್ಮಾಣದ ಸೌಲಭ್ಯ:** ಮನೆ ಕಟ್ಟಡ ನಿರ್ಮಾಣದ ವ್ಯಾಖ್ಯಾನದಲ್ಲಿ ಕಟ್ಟಡ ನಿರ್ಮಾಣ, ಜೋಡಣೆಗಳು, ಜೋಡಿಕೆಗಳು, ನವೀಕರಣ ಇತ್ಯಾದಿ ಮತ್ತು ಎಲ್ಲ ಶಾಶ್ವತ ರಚನೆಗಳು/ವಿಭಾಗಗಳು ಒಳಗೊಂಡಿರುತ್ತವೆ. ಆದರೆ ಇದರಲ್ಲಿ ಮನೆಯಲ್ಲಿರುವ ವಸ್ತುಗಳು ಸೇರಿರುವುದಿಲ್ಲ. ಇದರ ಜೊತೆಗೆ ಕಟ್ಟಡವನ್ನು ಕೇವಲ ವಸತಿ ಉದ್ದೇಶಗಳಿಗೆ ಬಳಸಬೇಕು. ಯಾವುದೇ ವಾಣಿಜ್ಯಿಕ ಉದ್ದೇಶ/ಹಾಲಿಡೇ ಹೋಮ್ ಇತ್ಯಾದಿಗೆ ಬಳಸುವಂತಿಲ್ಲ.

ಈ ವಿಮಾ ಸೌಲಭ್ಯವು ಪಾಲಿಸಿಯ ಅವಧಿಯಲ್ಲಿ ಸಂಭವಿಸುವ ಈ ಕೆಳಗಿನ ಅನಿರೀಕ್ಷಿತ ಘಟನೆಗಳಿಂದ ಕಟ್ಟಡದಲ್ಲಿ ಆಗಿರುವ ಭೌತಿಕ ಹಾನಿ ಅಥವಾ ನಷ್ಟಕ್ಕೆ ಭದ್ರತೆಯನ್ನು ನೀಡುತ್ತದೆ.

- **ಅಗ್ನಿ, ಸಿಡಿಲು, ಸ್ಫೋಟ ಅಥವಾ ಅಂತಃಸ್ಫೋಟ**
- **ಭೂಕಂಪ, ಪ್ರವಾಹ, ಬಿರುಗಾಳಿ, ಚಂಡಮಾರುತ, ಸುನಾಮಿ, ಜ್ವಾಲಾಮುಖಿ ಸ್ಫೋಟ ಇತ್ಯಾದಿ.**
- **ನಿಮ್ಮ ಮನೆಯ ಕಟ್ಟಡವಿರುವ ಭೂಮಿ ಕುಸಿತ, ಬಂಡೆ ಕುಸಿತ.**
- **ಪೊದೆ ಬೆಂಕಿ, ಕಾಡಿನ ಬೆಂಕಿ.**
- **ಯಾವುದೇ ರೀತಿಯ ಬಾಹ್ಯ ಹಾನಿಯಿಂದ ಆಗುವ ಪರಿಣಾಮ (ಉದಾ: ವಾಹನ, ಮರ ಬೀಳುವುದು, ವಿಮಾನ, ಹೊರಗೋಡೆಗಳು ಇತ್ಯಾದಿ.).**
- **ಗಲಭೆ, ಮುಷ್ಕರ, ದುರುದ್ದೇಶದಿಂದ ಮಾಡಿದ ಹಾನಿ.**
- **ಭಯೋತ್ಪಾದನೆಯ ಕೃತ್ಯಗಳು.**
- **ನೀರಿನ ಟ್ಯಾಂಕ್‌ಗಳು ಸಿಡಿಯುವುದು ಅಥವಾ ತುಂಬಿ ತುಳುಕುವುದು, ಉಪಕರಣಗಳು ಮತ್ತು ಪೈಪ್‌ಗಳು ಹಾಳಾಗುವುದು.**
- **ಸ್ವಯಂಚಾಲಿತ ತುಂತುರು ಘಟಕಗಳಲ್ಲಿ ಸೋರಿಕೆ.**

**ಮನೆಯಲ್ಲಿರುವ ವಸ್ತುಗಳಿಗೆ ಸೌಲಭ್ಯ:** ಮನೆಯಲ್ಲಿರುವ ವಸ್ತುಗಳು ಎಂದರೆ ಮನೆಯ ಬಳಕೆಗಾಗಿ ವಿಮೆಗಾರನ ಮನೆಯಲ್ಲಿರುವ ಪೀಠೋಪಕರಣಗಳು, ಜೋಡಣೆಗಳು, ಜೋಡಿಕೆಗಳು, ಬಟ್ಟೆಬರೆಗಳು, ಅಡುಗೆ ಮನೆಯ ಉಪಕರಣಗಳು, ಪಾತ್ರೆ-ಪಗಡಿಗಳು ಮತ್ತು ಅಂತಹ ಎಲ್ಲ ವಸ್ತುಗಳು. ಈ ಕೆಳಗಿನ ಕಾರಣಗಳಿಂದ ಮನೆಯಲ್ಲಿರುವ ವಸ್ತುಗಳಿಗೆ ಹಾನಿ ಅಥವಾ ನಷ್ಟ ಉಂಟಾದರೆ ಈ ಐಚ್ಛಿಕ ಸೌಲಭ್ಯಗಳು ನಷ್ಟವನ್ನು ಮರುಭರ್ತಿ ಮಾಡಿಕೊಡುತ್ತದೆ.

- **ಭೂಕಂಪ ಸೇರಿದಂತೆ ಬೆಂಕಿ ಮತ್ತು ಸಂಬಂಧಪಟ್ಟ ಇತರ ಅವಘಡಗಳು**
- **ದರೋಡೆ, ಕಳ್ಳತನ ಮತ್ತು ಸುಲಿಗೆ.**

## ಗೃಹ ವಿಮೆಯ ಖರೀದಿ

**ಯಾವುದೇ ಗೃಹ ವಿಮಾ ಪಾಲಿಸಿಯ ಪ್ರಾಥಮಿಕ ಕಾರ್ಯ ಏನೆಂದರೆ ವಿಮಾದಾರನ ಕಟ್ಟಡಕ್ಕೆ, ವೈಯಕ್ತಿಕ ಸ್ವತ್ತುಗಳು, ಮೂರನೇ ಪಾರ್ಟಿಯ ಬಾಧ್ಯತೆಗೆ ಸುರಕ್ಷತೆಯನ್ನು ಒದಗಿಸುವುದು ಮತ್ತು ಹಾನಿ ಸಂಭವಿಸಿದ ಮನೆಯು ದುರಸ್ಥಿ ಹೊಂದುವ ತನಕ ವಾಸದ ವೆಚ್ಚವನ್ನು ಒದಗಿಸುವುದು. ಗೃಹ ವಿಮಾ ಪಾಲಿಸಿಯಲ್ಲಿರುವ ಒಂದು ಉತ್ತಮ ಅಂಶ ಏನೆಂದರೆ ಗ್ರಾಹಕರಿಗೆ ತಕ್ಕಂತೆ ಸೌಲಭ್ಯವನ್ನು ಒದಗಿಸುವುದು. ಮೇಲೆ ಚರ್ಚೆ ಮಾಡಿದ ರೀತಿಯಲ್ಲಿ ಅನೇಕ ವಿಭಾಗಗಳಲ್ಲಿ ಸೌಲಭ್ಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಇವುಗಳಲ್ಲಿ ಕನಿಷ್ಠ 3ನ್ನು ಪಾಲಿಸಿದಾರರೇ ಆಯ್ಕೆ ಮಾಡಿಕೊಳ್ಳಬೇಕು. ಕೆಲವು ಪಾಲಿಸಿಗಳು ಸಾಕುಪ್ರಾಣಿಗಳು ಮತ್ತು ಕಲಾ ಪ್ರಕಾರಗಳಿಗೂ ಕೂಡ ಸೌಲಭ್ಯವನ್ನು ಕಲ್ಪಿಸುತ್ತದೆ. ಮಾಲೀಕರು ಮತ್ತು ಬಾಡಿಗೆದಾರರು ಇಬ್ಬರಿಗೂ ಲಭ್ಯವಿರುವ ಈ ಪಾಲಿಸಿಯನ್ನು ತಮ್ಮ ಅಗತ್ಯಗಳಿಗೆ ತಕ್ಕಂತೆ ರೂಪಿಸಿಕೊಳ್ಳಬಹುದು ಎಂಬುದು ಗಮನಾರ್ಹ. ಪಾಲಿಸಿ ವೆಚ್ಚಗಳು/ ಪ್ರೀಮಿಯಂ ಕೈಗೆಟುಕಬಲ್ಲುದಾಗಿದ್ದು, ನಿಮ್ಮ ಪಾಕೆಟ್ ಮೇಲೆ ಹೆಚ್ಚಿನ ಭಾರವನ್ನೇನೂ ಹೊರಿಸುವುದಿಲ್ಲ.**

**ಈ ಎಲ್ಲ ಅನುಕೂಲಗಳು ಮತ್ತು ಪ್ರಯೋಜನಗಳ ಹೊರತಾಗಿಯೂ ಗೃಹ ವಿಮೆಯನ್ನು ಖರೀದಿಸುವುದರಿಂದ ದೊರೆಯುವ ಬಹುದೊಡ್ಡ ಪ್ರಯೋಜನ ಏನೆಂದರೆ ಮಾನಸಿಕ ನೆಮ್ಮದಿ. ಹಾಗಾಗಿ ನೀವು ಸ್ವಂತ ಮನೆಯನ್ನು ಕಟ್ಟಲು ಮುಂದಾಗಿದ್ದರೆ ಅಥವಾ ಮನೆ ಖರೀದಿಸುವ ಯೋಜನೆ ಹೊಂದಿದ್ದರೆ ಅಥವಾ ನೀವಿನ್ನೂ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರೆ ನಿಮ್ಮ ಆಶ್ರಯದಾಣದಲ್ಲಿ ಯಾವುದೇ ಟೆನ್ಷನ್ ಇಲ್ಲದೇ ನೆಮ್ಮದಿಯ ಜೀವನ ನಡೆಸುವ ಇಚ್ಛೆ ನಿಮ್ಮದಾಗಿದ್ದರೆ ಗೃಹ ವಿಮೆಯನ್ನು ಖರೀದಿ ಮಾಡುವುದು ಉತ್ತಮ ಆಯ್ಕೆ. ಹಾಗಾದರೆ ಯಾಕೆ ತಡ? ಇಂದೇ ನಿಮ್ಮ ಇನ್ಶೂರೆನ್ಸ್ ಬ್ರೋಕರ್ ಜೊತೆ ಮಾತನಾಡಿ.**

ಪಾಲಿಸಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ಕೈಗೊಂಡ ಮೌಲ್ಯಮಾಪನದ ಆಧಾರದಲ್ಲಿ ವಿಮಾದಾರನು ಮರುಸ್ಥಾಪನೆ ಅಥವಾ ಮಾರುಕಟ್ಟೆ ಮೌಲ್ಯವನ್ನು ಆಯ್ಕೆ ಮಾಡಿಕೊಳ್ಳಬಹುದು.

**ಇತರ ಐಚ್ಛಿಕ ಸೌಲಭ್ಯಗಳು ಮತ್ತು ವಿಭಾಗಗಳು:** ಮೇಲೆ ಪ್ರಸ್ತಾಪ ಮಾಡಿದ ಪ್ರಮುಖ ಸೌಲಭ್ಯ/ವಿಭಾಗದ ಹೊರತಾಗಿಯೂ ವಿಮಾದಾರನು ಲಭ್ಯವಿರುವ ಇತರ ಅನೇಕ ಆಯ್ಕೆಗಳನ್ನು ಮಾಡಿಕೊಳ್ಳಬಹುದು. ಇವುಗಳನ್ನು ತಮ್ಮ ಅಗತ್ಯಗಳಿಗೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.

## ಸಾಲ ಪಡೆದ ಬಳಿಕ...

**●ಹೊಸ ಹೂಡಿಕೆ ಮಾಡಿದ ಎಷ್ಟು ದಿನಗಳ ಬಳಿಕ ಗ್ರಾಹಕನು ಸೆಕ್ಯುರಿಟಿಗೆ ಪ್ರತಿಯಾಗಿ ಸಾಲಕ್ಕೆ ಅರ್ಜಿ ಸಲ್ಲಿಸಬಹುದು?**

ಇ-ವೆಲ್ತ್ ಖಾತೆಯ ಡಿಮ್ಯಾಟ್ ಹೋಲ್ಡಿಂಗ್‌ನಲ್ಲಿ ಹೂಡಿಕೆಯ ವಿವರಗಳು ಕಾಣಿಸಿದರೆ ಗ್ರಾಹಕನು ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ಸಾಮಾನ್ಯವಾಗಿ ಈ ಪ್ರಕ್ರಿಯೆಗೆ 2ರಿಂದ 3 ಕೆಲಸದ ದಿನಗಳು ತಗಲುತ್ತವೆ.

**●ಎಲ್‌ಎಎಸ್ ಅವಧಿ ಸಾಲಕ್ಕೆ ಇಎಂಐ ಪಾವತಿಯ ದಿನಾಂಕಗಳು ಯಾವುದು?**

ಎಲ್‌ಎಎಸ್ ಅವಧಿ ಸಾಲದ ಇಎಂಐ ಸಂಗ್ರಹ ದಿನಾಂಕವು ಈ ಕೆಳಗಿನ ಟೇಬಲ್‌ಗೆ ತಕ್ಕಂತೆ ಸಾಲವನ್ನು ವಿತರಣೆ ಮಾಡಿದ ದಿನಾಂಕವನ್ನು ಅವಲಂಬಿಸಿರುತ್ತದೆ:

| ಸಂದರ್ಭ | ಸಾಲವನ್ನು ಯಾವುದೇ ತಿಂಗಳ ಒಂದನೇ ತಾರೀಕಿನಿಂದ 15ನೇ ತಾರೀಕಿನ ಒಳಗೆ (ಎರಡೂ ದಿನಾಂಕಗಳು ಒಳಗೊಂಡು) ವಿತರಣೆ ಮಾಡಿದರೆ: | ಸಾಲವನ್ನು ಯಾವುದೇ ತಿಂಗಳ 16 ತಾರೀಕಿನಿಂದ ಕೊನೆಯ ದಿನಾಂಕದ ಒಳಗೆ (ಎರಡೂ ದಿನಾಂಕಗಳು ಒಳಗೊಂಡು) ವಿತರಣೆ ಮಾಡಿದರೆ: |
|---|---|---|
| ಇಎಂಐ ಗಡುವಿನ ದಿನಾಂಕ | ಮುಂದಿನ ತಿಂಗಳ 10ನೇ ದಿನಾಂಕ: ಒಂದು ವೇಳೆ 10ನೇ ತಾರೀಕು ವ್ಯವಹಾರದ ದಿನವಾಗಿರದೇ ಇದ್ದರೆ ಇಎಂಐ ಮುಂದಿನ ತಕ್ಷಣದ ವ್ಯವಹಾರದ ದಿನಾಂಕದಂದು ಬರುತ್ತದೆ. | ಅದೇ ತಿಂಗಳ 25ನೇ ತಾರೀಕು. ಒಂದು ವೇಳೆ 25ನೇ ತಾರೀಕು ವ್ಯವಹಾರದ ದಿನವಾಗಿರದೇ ಇದ್ದರೆ ಇಎಂಐ ಮುಂದಿನ ತಕ್ಷಣದ ವ್ಯವಹಾರದ ದಿನಾಂಕದಂದು ಬರುತ್ತದೆ. |

**●ಎಲ್‌ಎಎಸ್ ಅವಧಿ ಸಾಲದಲ್ಲಿ ಗ್ರಾಹಕನು ಇಎಂಐ ದಿನಾಂಕವನ್ನು 10ರಿಂದ 25ಕ್ಕೆ ಮತ್ತು 25ರಿಂದ 10ಕ್ಕೆ ಬದಲಿಸಲು ಸಾಧ್ಯವಿದೆಯೇ?**

ಇಲ್ಲ, ಸಾಧ್ಯವಿಲ್ಲ. ಎಲ್‌ಎಎಸ್ ಅವಧಿ ಸಾಲದಲ್ಲಿ ಇಎಂಐ ದಿನಾಂಕವನ್ನು ಬದಲಿಸಲು ಸಾಧ್ಯವಿಲ್ಲ.

| ಸೌಲಭ್ಯ | ವಿವರಣೆಗಳು |
|---|---|
| ಕಳ್ಳತನ ಸೇರಿದಂತೆ ದರೋಡೆ ಮತ್ತು ಮನೆಗಳ್ಳತನ. | ಕಳ್ಳತನ/ದರೋಡೆ/ಡಕಾಯಿತಿಯ ಮೂಲಕ ಉಂಟಾದ ನಷ್ಟ ಅಥವಾ ಹಾನಿ (ನಗದು ಮತ್ತು ಅಮೂಲ್ಯ ವಸ್ತುಗಳನ್ನು ಹೊರತುಪಡಿಸಿ). ಕಳ್ಳತನ, ದರೋಡೆಯಿಂದ ಅಥವಾ ಯಾವುದೇ ಬೆದರಿಕೆಯಿಂದ ವಿಮಾದಾರನ ಮನೆಗೆ ಉಂಟಾದ ಹಾನಿಯನ್ನೂ ಭರ್ತಿ ಮಾಡಿಕೊಡಲಾಗುತ್ತದೆ ಅಥವಾ ಸುರಕ್ಷತೆಯನ್ನು ಒದಗಿಸುತ್ತದೆ. |
| ಆಭರಣಗಳು/ಮೌಲ್ಯಭರಿತ ವಸ್ತುಗಳಿಗೆ ಸಂಬಂಧಿಸಿದ ರಿಸ್ಕ್ | ಭಾರತದ ಯಾವುದೇ ಸ್ಥಳದಲ್ಲಿ ಸಂಭವಿಸಿದ ಅವಘಡದಿಂದ ಅಥವಾ ದುರಾದೃಷ್ಟಕರ ಘಟನೆಯಿಂದ ಆಭರಣಗಳು, ಮೊಬೈಲ್ ಫೋನ್‌ಗಳು ಮತ್ತು ಅಮೂಲ್ಯ ವಸ್ತುಗಳಿಗೆ ಸಂಭವಿಸಿದ ನಷ್ಟ ಅಥವಾ ಹಾನಿಯನ್ನು ಈ ಸೌಲಭ್ಯದಿಂದ ತುಂಬಿಕೊಡಲಾಗುತ್ತದೆ. |
| ಗೃಹ ಬಳಕೆಯ, ಮೆಕಾನಿಕಲ್ ಮತ್ತು ಎಲೆಕ್ಟ್ರಿಕಲ್ ಉಪಕರಣಗಳು | ಈ ವಿಭಾಗದಲ್ಲಿ ಮೆಕಾನಿಕಲ್ ಮತ್ತು ಅಥವಾ ಎಲೆಕ್ಟ್ರಿಕಲ್ ಸಮಸ್ಯೆಯ ಕಾರಣದಿಂದ ಗೃಹ ಬಳಕೆಯ ಎಲೆಕ್ಟ್ರಿಕಲ್/ಮೆಕಾನಿಕಲ್ ಉಪಕರಣಗಳಿಗೆ ನಷ್ಟ ಅಥವಾ ಹಾನಿ ಸಂಭವಿಸಿದರೆ ಭರ್ತಿ ಮಾಡಿಕೊಡಲಾಗುತ್ತದೆ. |
| ಗೃಹ ಬಳಕೆಯ, ಎಲೆಕ್ಟ್ರಾನಿಕ್ ಉಪಕರಣಗಳು | ವಿಮಾದಾರನ ಮನೆಯಲ್ಲಿ ಇರುವ ಅಥವಾ ಅಳವಡಿಸಿದ ಕಂಪ್ಯೂಟರ್‌ಗಳು (ಬಿಡಿಭಾಗಗಳು ಮತ್ತು ಪ್ರಿಂಟರ್), ಇತರ ಗೃಹ ಬಳಕೆಯ ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಅಥವಾ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಅನುಸ್ಥಾಪನೆಗಳಿಗೆ ನಷ್ಟ ಅಥವಾ ಹಾನಿ ಸಂಭವಿಸಿದರೆ ಭರ್ತಿಮಾಡಿಕೊಡಲಾಗುತ್ತದೆ. |
| ಟೆಲಿವಿಷನ್ | ಈ ಸೌಲಭ್ಯದಲ್ಲಿ, ವಿಮಾದಾರನ ಮನೆಯಲ್ಲಿ ಅಗ್ನಿ ದುರಂತ ಮತ್ತು ಇತರ ಗಂಡಾಂತರಗಳು, ದರೋಡೆ, ಕಳ್ಳತನ, ಅವಘಢ, ಗಲಭೆ, ನೈಸರ್ಗಿಕ ವಿಕೋಪ ಇತ್ಯಾದಿಗಳಿಂದ ಟಿವಿ ಸೆಟ್ ಮತ್ತು ಇತರ ಸಾಧನಗಳಿಗೆ ಸಂಭವಿಸಿರುವ ಹಾನಿ/ನಷ್ಟವನ್ನು ತುಂಬಿಕೊಡಲಾಗುತ್ತದೆ. |
| ಪೆಡಲ್ ಸೈಕಲ್ | ವಿಮಾದಾರನ ಮನೆಯಲ್ಲಿ ಸಂಭವಿಸಿದ ಅಗ್ನಿ ದುರಂತ ಮತ್ತು ಇತರ ಗಂಡಾಂತರಗಳು, ದರೋಡೆ, ಕಳ್ಳತನ, ಅವಘಡ, ಗಲಭೆ, ನೈಸರ್ಗಿಕ ವಿಕೋಪ ಇತ್ಯಾದಿಗಳಿಂದ ಪೆಡಲ್ ಸೈಕಲ್‌ಗಳಿಗೆ ಸಂಭವಿಸಿದ ಹಾನಿ/ನಷ್ಟವನ್ನು ತುಂಬಿಕೊಡಲಾಗುತ್ತದೆ. |
| ಪ್ಲೇಟ್ ಗ್ಲಾಸ್ | ವಿಮಾದಾರನ ಮನೆಯ ಆವರಣದಲ್ಲಿ ಸಂಭವಿಸಿದ ಅವಘಡಗಳಿಂದ ಪ್ಲೇಟ್ ಗ್ಲಾಸ್, ಚೌಕಟ್ಟುಗಳಿಗೆ ಉಂಟಾಗುವ ಹಾನಿ-ನಷ್ಟವನ್ನು ಭರ್ತಿ ಮಾಡಿಕೊಡಲಾಗುತ್ತದೆ. |
| ಸರಕು ಸಾಮಗ್ರಿಗಳು | ವಿಮಾದಾರರು ಮತ್ತು ಅಥವಾ ವಿಮಾದಾರನ ಜೊತೆಗೆ ಶಾಶ್ವತವಾಗಿ ವಾಸವಿರುವ ಕುಟುಂಬದ ಸದಸ್ಯರು ಭಾರತದ ಯಾವುದೇ ಭಾಗದಲ್ಲಿ ಪ್ರಯಾಣ ಮಾಡುತ್ತಿರುವ ಸಂದರ್ಭದಲ್ಲಿ ಸಂಭವಿಸಿದ ಅವಘಡ ಅಥವಾ ದುರದೃಷ್ಟಕರ ಘಟನೆಯಿಂದ ಸರಕು ಸಾಮಗ್ರಿ (ಬ್ಯಾಗೇಜ್) ನಷ್ಟ, ಹಾನಿ ಸಂಭವಿಸಿದರೆ ವಿಮಾ ಕಂಪನಿಯು ಅದನ್ನು ತುಂಬಿಕೊಡುತ್ತದೆ. |
| ವೈಯಕ್ತಿಕ ಅಪಘಾತ | ವಿಮಾದಾರನು ಅಥವಾ ಆತನ/ಆಕೆಯ ಕುಟುಂಬದೊಂದಿಗೆ ಶಾಶ್ವತವಾಗಿ ವಾಸವಿರುವ ಇತರ ಸದಸ್ಯರಿಗೆ ಬಾಹ್ಯ ಅವಘಡದಿಂದ ನೇರವಾಗಿ ಸಂಭವಿಸಿದ ಗಾಯ ಮತ್ತು ಅದರಿಂದ ಉಂಟಾದ ಸಾವು ಅಥವಾ ಅಂಗವಿಕಲತೆ. |
| ಕಾನೂನಿನ ಬಾಧ್ಯತೆ | ವಿಮಾದಾರನು ಕಾನೂನಿಗೆ ಸಂಬಂಧಿಸಿದಂತೆ ವ್ಯಯ ಮಾಡಿದ ಮೊತ್ತವನ್ನು ವಿಮಾ ಕಂಪನಿಯು ತುಂಬಿಕೊಡುತ್ತದೆ. |


**ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.**
(ARN-79020)
ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು
ನಮ್ಮ ಸಂಪರ್ಕ: 9148319207, 080-42129917
ಇ-ಮೇಲ್: Mail: info@inspireindiafs.com

**ವಿಳಾಸ**
ನಂ.119, 2ನೇ ಮಹಡಿ,
ರಾಧಾಕೃಷ್ಣ ಸದನಂ (ಎಚ್‌ಡಿಎಫ್‌ಸಿ ಬ್ಯಾಂಕ್ ಮೇಲ್ಭಾಗ), ಗಾಂಧಿಬಜಾರ್ ಮುಖ್ಯ ರಸ್ತೆ, ಬಸವನಗುಡಿ,
ಬೆಂಗಳೂರು-5600004, ಕರ್ನಾಟಕ


### ನಮ್ಮ ಸೇವೆಗಳು

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ವಿಮೆ
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್
5. ತೆರಿಗೆ ಉಳಿತಾಯ ಬಾಂಡ್ ಗಳು
6. ಫೈನಾನ್ಸಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
7. ವೆಲ್ತ್ ಮ್ಯಾನೇಜ್ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ


**ಡಿಸ್ಕ್ಲೈಮರ್**

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯು ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯಕ್ಕೆ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

# NJ PORTFOLIO MANAGMENT SERVICES (PMS)

## PERFORMANCE OF BLUECHIP PORTFOILO (TWRR)

| PERIOD | BLUECHIP | | NIFTY 500 TRI | |
|---|---|---|---|---|
| | RETURN | VOLATILITY | RETURN | VOLATILITY |
| 12 M | 78.32 | 13.97 | 62.87 | 14.61 |
| 24 M | 40.64 | 19.56 | 28.27 | 22.90 |
| 36 M | 25.96 | 18.06 | 19.50 | 20.65 |
| SINCE INCEPTION* | 23.01 | 17.17 | 16.50 | 19.49 |

## PERFORMANCE OF MIDCAP PORTFOILO (TWRR)

| PERIOD | MULTICAP | | NIFTY 500 TRI | |
|---|---|---|---|---|
| | RETURN | VOLATILITY | RETURN | VOLATILITY |
| 12 M | 77.84 | 15.97 | 62.87 | 14.61 |
| 24 M | 40.60 | 23.57 | 28.27 | 22.90 |
| 36 M | 20.34 | 21.58 | 19.50 | 20.65 |
| 60M | 14.44 | 19.81 | 16.62 | 17.55 |
| SINCE INCEPTION * | 14.93 | 19.30 | 18.09 | 17.13 |

## PERFORMANCE OF FREEDOM ETF PORTFOILO (TWRR)

| PERIOD | FREEDOM ETF | | NIFTY 500 TRI | |
|---|---|---|---|---|
| | RETURN | VOLATILITY | RETURN | VOLATILITY |
| 12 M | 53.72 | 11.43 | 62.87 | 14.61 |
| 24 M | 24.81 | 18.49 | 28.27 | 22.90 |
| 36 M | 16.18 | 17.47 | 19.50 | 20.65 |
| SINCE INCEPTION* | 12.94 | 16.83 | 16.94 | 19.48 |

- Performance is as on Sept 30, 2021; Calculated on a TWRR (time-weighted rate of return) basis
- *Inception Date: March 09, 2018
- Past performance may or may not sustained in future and does not guarantee future return
- Past performance is post expenses and pre-tax
- Above performance data is not verified by SEBI

Note: Minimum Investment is Rs. 50 lakhs

ಮೊಟ್ಟ ಮೊದಲನೆಯದಾಗಿ ಈ ಪುಸ್ತಕ ಬರೆಯಲು ಕಾರಣವೇನೆಂದರೆ, ಹೂಡಿಕೆ ಎಂಬುದರ ಅರ್ಥವನ್ನು ಈಗಿನ ಸಂಕೀರ್ಣ ಅರ್ಥಕ್ಕಿಂತ ಒಂದಷ್ಟು ಸರಳೀಕರಿಸುವುದು.

ಹೂಡಿಕೆಯಬಗ್ಗೆ ಸಾಕಷ್ಟು ಮಾಹಿತಿ ಇಲ್ಲದ ಬಹು ಮಂದಿ ನಮ್ಮ ಸುತ್ತಲೂ ಇದ್ದಾರೆ. ನಾವು ಏನನ್ನು ಹೂಡಿಕೆ ಮಾಡುತ್ತಿದ್ದೇವೆ? ಎಷ್ಟು ಹೂಡಿಕೆ ಮಾಡುತ್ತಿದ್ದೇವೆ?  ಮತ್ತು ಯಾವುದಕ್ಕಾಗಿ ಹೂಡಿಕೆ ಮಾಡುತ್ತಿದ್ದೇವೆ? ಎಂಬುದೇ ಗೊತ್ತಿಲ್ಲದ ವರ್ಗ ಅದು. ಈ ಪುಸ್ತಕ ಓದಿದ ನಂತರ ನಿಮ್ಮನ್ನು ನೀವು " ಸುಶಿಕ್ಷಿತ ಹೂಡಿಕೆದಾರ" ಎಂದು ಕರೆದುಕೊಳ್ಳಬಹುದು ಎಂಬುದನ್ನು ಖಾತ್ರಿಯಾಗಿ ಹೇಳಬಹುದು.




ಪುಸ್ತಕದ ದರ: Rs. 285/-







# Honestly!

# Wealth is Health!

**To Address:**